
ಟಿ. ಪಿ. ಅಕ್ಕಿ

T. P. AKKI



ಕರ್ನಾಟಕ ಲಲಿತಕಲಾ ಅಕಾಡೆಮಿ

Karnataka Lalithakala Academy



ವಿ. ಟಿ. ಕಾಳೆ

ಕರ್ನಾಟಕ ಕಲಾ ಲೋಕದಲ್ಲಿ ವಿ.ಟಿ. ಕಾಳೆ ಎಂದೇ ಪ್ರಸಿದ್ಧರಾಗಿರುವ ಶ್ರೀ ವೆಂಕಟೇಶ ತುಳಜಾರಾಮ್ ಕಾಳೆಯವರ ಜನನ 1934. 1949 ರಿಂದ ಶ್ರೀ ಟಿ.ಪಿ. ಅಕ್ಕಿಯವರ ಮಾರ್ಗದರ್ಶನದಲ್ಲಿಉಚ್ಚ ಕಲಾ ಶಿಕ್ಷಣ ಪಡೆದ ಶ್ರೀಯುತರು 1953ರಲ್ಲಿ ಜೆ. ಜೆ. ಕಲಾ ಶಾಲೆಯಿಂದ ಡಿಪ್ಲೊಮಾ ಪದವಿ ಗಳಿಸಿಕೊಂಡರು. 1952 ರಿಂದ ಕೆಲಕಾಲ ಗದುಗಿನ ವಿಜಯ ಕಲಾ ಮಂದಿರದಲ್ಲಿ ಶಿಕ್ಷಕ ವೃತ್ತಿಯನ್ನು ನಡೆಸಿದ ಶ್ರೀಯುತರ 1964ರಿಂದ 1992 ರವರೆಗೆ ಸೊಂಡೂರಿನ ಸಹ ವಸತಿ ಕಿರಿಯ ಮಹಾ ವಿದ್ಯಾಲಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಾಥಮಿಕ ಶಿಕ್ಷಣ ಪಠ್ಯವಸ್ತು ನವೀಕರಣ ಸಮಿತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಶ್ರೀಯುತರು 'ಕೇಫ' ಎಂಬ ಕೇಂದ್ರ ಸರ್ಕಾರ ಯೋಜನೆಯಲ್ಲಿ ಕರ್ನಾಟಕ ಸರ್ಕಾರದವರು ನೇಮಿಸಿದ ರಾಜ್ಯ ಸಲಹಾ ಸಮಿತಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿದ ಶ್ರೀಯುತರಿಗೆ ಅಕಾಡೆಮಿಯ ಬಹುಮಾನ ಹಾಗೂ ಪ್ರಶಸ್ತಿಗಳು ಸಂದಿವೆ. ಸಧ್ಯ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಕ್ರಿಯ ಸದಸ್ಯರಾಗಿರುವ ಇವರು ಇಪ್ಪತ್ತಕ್ಕೂ ಹೆಚ್ಚಿನ ನಾಟಕಗಳನ್ನು ರಚಿಸಿ ನಿರ್ದೇಸಿದ್ದಾರೆ. ಸ್ವತಃ ನಟರೂ ಆದ ಇವರು ಅನೇಕ ನಾಟಕ ಹಾಗೂ ಚಲನಚಿತ್ರಗಳಲ್ಲಿ ನಟಿಸಿದ್ದಾರೆ.

ಇವರ ಕಲಾಕೃತಿಗಳು ಸೊಂಡೂರಿನ ಅರಮನೆಯಲ್ಲಿ, ಶ್ರೀ ಎಂ. ವೈ. ಘೋರ್ಪಡೆಯವರ ಸಂಗ್ರಹದಲ್ಲಿ ಹಾಗೂ ರಾಜ್ಯದ ಮತ್ತು ರಾಷ್ಟ್ರದ ಅನೇಕ ಕಡೆಗಳಲ್ಲದೆ ಪಾಕಿಸ್ಥಾನ, ಇಂಗ್ಲೆಂಡ್, ಅಮೇರಿಕದಲ್ಲಿಯೂ ಸಂಗ್ರಹವಾಗಿದೆ.

ಚಿತ್ರಕಲೆಯ ಬಗ್ಗೆ ಅನೇಕ ಲೇಖನಗಳನ್ನು ಬರೆದಿರುವ ಶ್ರೀಯುತರು ಅಕಾಡೆಮಿಗಾಗಿ ಹಿರಿಯ ಕಲಾವಿದ ಶ್ರೀ ಎಸ್. ಎಂ. ಪಂಡಿತ್ ಅವರ ಬಗ್ಗೆಯೂ ಪುಸ್ತಕವನ್ನು ಬರೆದಿದ್ದಾರೆ. 'ಚಿತ್ರಕಲಾ ಪರಿಚಯ' ಮುಂತಾಗಿ ಕಲಾ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅನೇಕ ಪುಸ್ತಕಗಳ ರಚನೆ ಅಲ್ಲದೆ, ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕ ಕಲಾವಿದರು : 31

ಟಿ. ಪಿ. ಅಕ್ಕಿ

ವ್ಹಿ.ಟಿ. ಕಾಳೆ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560002

T.P. Akki : A Biography by V.T. Kale for the Karnataka Lalitakala Academy, 14/3, Canara Finance Corporation Building, Nrupatunga Road, Bangalore - 560 002.

Published By : K. Mukundan, Registrar
First Impression : 1994
Copies : 1000
Price : Rs. 10-00

Printed by: Brindavan Printers
and Publishers (P) Ltd, Lalbagh Fort Road,
Bangalore - 560004

ಮೊದಲ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿರುವುದು ಒಂದು. ಈ ಪುಸ್ತಕಗಳು ಆ ಹೆಸರಾಂತ ಕಲಾವಿದರ, ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಕಲೆಯು ಬೆಳೆದು ಬಂದ ದಾರಿ ಮತ್ತು ಅವರ ಜೀವನ ಚರಿತ್ರೆಯ ತಿಳುವಳಿಕೆ ಉಂಟುಮಾಡಲು ಸಹಾಯವಾಗಬಲ್ಲದು.

ಈ ಯೋಜನೆಯಲ್ಲಿ ಈಗಾಗಲೇ ಮೂವತ್ತು ಸಚಿತ್ರ ಸುಂದರ ಹೊತ್ತಿಗೆಗಳು ಹೊರಬಂದಿವೆ. ಈಗ, ಅಂದರೆ 1994-95ನೇ ಸಾಲಿನಲ್ಲಿ ಹಲವಾರು ಹೊತ್ತಿಗೆಗಳು ಹೊರಬಂದಿದ್ದು, ಇನ್ನೂ ಒಂದೆರಡು ಸಿದ್ಧವಾಗುತ್ತಲಿವೆ. ಈಗ ಬಿಡುಗಡೆಯಾಗುತ್ತಿರುವ ಪುಸ್ತಕ ಹಿಂದಿನ ಮತ್ತು ಇಂದಿನ ಪೀಳಿಗೆಗೆ ಹಿರಿಯರಾದ ಟಿ. ಪಿ. ಅಕ್ಕಿ ಅವರನ್ನು ಕುರಿತದ್ದು.ಈ ಮಾಲೆ ಅತ್ಯಂತ ಜನಪ್ರಿಯವಾಗಿದ್ದು, ಈಗಾಗಲೇ ಕೆಲವು ಪುಸ್ತಕಗಳು ಪುನರ್ ಮುದ್ರಣವಾಗಿರುವುದು ಅವುಗಳ ಆವಶ್ಯಕತೆ, ಸಾರ್ಥಕತೆಗಳ ದ್ಯೋತಕ.

ಮಾನ್ಯ ಅಕ್ಕಿ ಅವರನ್ನು ನಾಲ್ಕು ಐದು ದಶಕಗಳಿಂದಲೂ ನಾನು ಬಲ್ಲವನಾಗಿದ್ದೆ. ಅವರ ಕಲಾ ಚಟುವಟಿಕೆಗಳನ್ನು ಗಮನಿಸುತ್ತಾ ಬಂದಿದ್ದೆ. ಅವರು ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ, ವಿಜಯ ಕಲಾ ಮಂದಿರದ ಸಂಸ್ಥಾಪಕರಾಗಿ ಕಲಾ ಪ್ರಪಂಚಕ್ಕೆ ಸಲ್ಲಿಸಿರುವ ಸೇವೆ ಚಿರಸ್ಮರಣೀಯವಾದುದು. ಈ ಕಿರು ಹೊತ್ತಿಗೆ ಹೊರಬರುತ್ತಿರುವ ಸಂದರ್ಭದಲ್ಲಿ ಅವರು ನಮ್ಮೊಡನೆ ಇಲ್ಲದಿರುವುದು ನಮ್ಮ ದುರ್ದೈವ.

ಈ ಪುಸ್ತಕಗಳನ್ನು ರಚಿಸಲು ಆರಿಸಿರುವ ಬರಹಗಾರರು ಕಲೆಯ ವಿಷಯ ಮತ್ತು ಆಯಾ ಕಲಾವಿದರ ಜೀವನದ ಬಗ್ಗೆ ಅರಿತವರು. ಇವುಗಳಿಗೆ ಆರಿಸಿರುವ ಚಿತ್ರಗಳೂ, ಆಯಾ ಕಲಾವಿದರ, ಅವರ ಕಲಾ ವಿಲಾಸದ ಪ್ರತೀಕ. ಅವು ಆಯಾ ಕಲಾವಿದರ, ಅವರ ಕಲಾ ಸಂಪತ್ತಿನ ವ್ಯಾಪ್ತಿಯನ್ನು ಅರಿಯಲು ಸಾಧಕವಾಗುವುದರಲ್ಲಿ ಸಂದೇಹವಿಲ್ಲ.

ಕಲಾವಿದರು, ಕಲಾ ರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

ಪಿ. ಆರ್. ತಿಪ್ಪೇಸ್ವಾಮಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ



ಟಿ. ಪಿ. ಅಕ್ಕಿ

ಸಾವಿರಾರು ಅರ್ಜುನ, ಭೀಮ, ಸುಯೋಧನರನ್ನು ಸೃಷ್ಟಿಸಲು ಸಾಧ್ಯವಿದೆ; ಒಬ್ಬ ದ್ರೋಣಾಚಾರ್ಯರನ್ನು ಸೃಷ್ಟಿಸುವುದು ಕಷ್ಟಸಾಧ್ಯ. ದ್ರೋಣಾಚಾರ್ಯರ ಹಿರಿಮೆ ಗರಿಮೆಗಳು ಅವರ ಪರಿಶುದ್ಧವಾದ ನಿಸ್ವಾರ್ಥ ಚಿತ್ತವೃತ್ತಿಯ ಮುಖ್ಯಾಂಶಗಳು. ಸಕಲ ಶಸ್ತ್ರ ವಿದ್ಯಾಪಾರಂಗತರಾದ ಆಚಾರ್ಯರು ಕುರು - ಪಾಂಡವ ಪುತ್ರರಿಗೆ ತಮ್ಮ ಅಗಾಧ ಶಸ್ತ್ರ ವಿದ್ಯೆಯನ್ನು ಧಾರೆಯೆರೆಯದೇ ಹೋಗಿದ್ದರೆ ಕುರುಕ್ಷೇತ್ರ ಮಹಾಯುದ್ಧವು ನಡೆಯುತ್ತಿತ್ತೋ ಇಲ್ಲವೋ?; 'ಸತ್ಯಮೇವ ಜಯತೆ' ಎಂಬ ನಿತ್ಯ ಸತ್ಯವು ಪ್ರಪಂಚದ ತಿಳಿವಿನ ಕಕ್ಷೆಗೆ ಬರುತ್ತಿತ್ತೋ ಇಲ್ಲವೊ? ತಮಗೆ ತಿಳಿದ ಶಸ್ತ್ರ ವಿದ್ಯೆಯನ್ನು ದ್ರೋಣಾಚಾರ್ಯರು ಸ್ವಾರ್ಥಕ್ಕೆ ಬಳಸಿಕೊಂಡು ಕುರು - ಪಾಂಡವರನ್ನೇ ನಿರ್ನಾಮಗೊಳಿಸಿ ಸಕಲ ಭೂಮಂಡಲದ ಏಕಚಕ್ರಾಧಿಪತ್ಯ ವನ್ನನುಭವಿಸಬಹುದಿತ್ತು. ಆದರೆ ದ್ರೋಣರ "ಆಚಾರ್ಯಬುದ್ಧಿ" ಅದಕ್ಕೊಪ್ಪದೇ ತಮ್ಮೆಲ್ಲ ವಿದ್ಯೆಯನ್ನೂ ಧಾರೆಯೆರೆದು "ಆಚಾರ್ಯ ಪುರುಷ"

ಪದವಿಗೇರಿದರು; ''ಗುರುರ್ಬ್ರಹ್ಮ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ'' ಎಂಬ ಆರ್ಯೋಕ್ತಿಗೆ ಸತ್ಯಸಾಕ್ಷಿಯಾದರು. ಇದೇ ಮಾತು, ಇದೇ ಬಣ್ಣನೆ ಕಲಾಚಾರ್ಯ ಟಿ.ಪಿ. ಅಕ್ಕಿ ಅವರಿಗೂ ಸಲ್ಲುತ್ತದೆ.

ಟಿ.ಪಿ. ಅಕ್ಕಿ ಚಿತ್ರಕಲಾ ಶಿಕ್ಷಣ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು; ಸಾಧನೆಯ ಇತಿಮಿತಿಗಳನ್ನು ಮೀರಿ ಬೆಳೆದ ಮಹಾಮೇರು. ಅಕ್ಕಿ ಅವರನ್ನು ಕುರಿತು ಹೇಳುವಾಗ ದ್ರೋಣಾಚಾರ್ಯರ ನೆನಪು ಅನಿವಾರ್ಯ. ಅದಕ್ಕೆ ಅಕ್ಕಿಯವರ ''ದ್ರೋಣಬುದ್ಧಿ'' ಯೂ ಕಾರಣವೆಂಬುದನ್ನು ಯಾರೂ ಒಪ್ಪಿಕೊಳ್ಳಬಹುದಾದ ಅಂಶ. ಅಕ್ಕಿಯವರನ್ನು ಅರಿಯದವರು ಈ ಬಣ್ಣನೆ ''ವೈಭವೀಕೃತ ಬಣ್ಣನೆ'' ಎಂದುಕೊಳ್ಳುವದಾದರೆ ಅಂಥವರಲ್ಲಿ ಲೇಖಕನು ಕ್ಷಮೆಯಾಚಿ ಸುತ್ತಾನೆ. ಅಕ್ಕಿ ಅವರನ್ನು ಹತ್ತಿರದಿಂದ ಕಂಡವರು, ಅವರ ಒಡನಾಟದಲ್ಲಿದ್ದವರು, ಅವರ ಶಿಷ್ಯವೃಂದ ಎಲ್ಲರೂ ಹೇಳುವುದು ಒಂದೇ ಮಾತು - ''ಅಕ್ಕಿಯವರು ಮಿಕ್ಕೆಲ್ಲರಿಗಿಂತ ನನ್ನ ಮೇಲೆ ಮಾತ್ರ ಬಹುಪ್ರೀತಿ ವಿಶ್ವಾಸಗಳನ್ನಿರಿಸಿಕೊಂಡವರು.'' ಈ ಅಂಶದಿಂದ ಅಕ್ಕಿ ಅವರ ಸ್ನೇಹಮಯ, ವಾತ್ಸಲ್ಯಮಯ ನಡೆ ನುಡಿಗಳ ಅವರ ಮೇರು ವ್ಯಕ್ತಿತ್ವದ ಪರಿಚಯವುಂಟಾಗುತ್ತದೆ.

ಯಾರು ಈ ಟಿ.ಪಿ. ಅಕ್ಕಿ? ಧಾರವಾಡ ಜಿಲ್ಲೆಯ ತಾಲೂಕಿನ ಸ್ಥಳವಾದ ಗದುಗಿನ ಮುನಸಿಪಲ್ ಹೈಸ್ಕೂಲಿನಲ್ಲಿ ಒಬ್ಬ ಸಾಮಾನ್ಯ ಚಿತ್ರಕಲಾ ಶಿಕ್ಷಕನಾಗಿ ಇಂದು ಕರ್ನಾಟಕದ ಉನ್ನತ ಮಟ್ಟದ ಚಿತ್ರಕಲಾ ಶಾಲೆಯೆಂದು ಪ್ರಖ್ಯಾತವಾಗಿರುವ ಗದುಗಿನ ವಿಜಯ ಕಲಾಮಂದಿರ ಮತ್ತು ವಿಜಯ ಲಲಿತಕಲಾ ಮಹಾವಿದ್ಯಾಲಯದ ಸಂಸ್ಥಾಪಕ ಈ ಅಕ್ಕಿ.

ಟಿ.ಪಿ. ಅಕ್ಕಿ ಅವರು ಮುಂಬಯಿಯ ಸರ್.ಜೆ.ಜೆ. ಕಲಾಶಾಲೆಯ 'ಆರ್ಟ್‌ಮಾಸ್ಟರ್' ಪದವೀಧರರಾಗಿ ಗದುಗಿಗೆ ಬಂದು ಚಿತ್ರಕಲಾ ಶಿಕ್ಷಕ ವೃತ್ತಿಯನ್ನು ಅವಲಂಬಿಸದಿದ್ದರೆ, ಮುಂಬಯಿಯಲ್ಲಿಯೇ ಉಳಿದು ಕಲಾಕೃತಿಗಳನ್ನು ರಚಿಸುತ್ತಾ, ಪ್ರದರ್ಶನಗಳನ್ನೇರ್ಪಡಿಸುತ್ತಾ, ಪತ್ರಿಕಾ ಪ್ರಚಾರವನ್ನು ಗಿಟ್ಟಿಸುತ್ತಾ ಹೋಗಿದ್ದರೆ ಟಿ.ಪಿ. ಅಕ್ಕಿ ಅವರೂ ಸಹ ಅನೇಕ ಹೆಸರಾಂತ ಕಲಾವಿದರಂತೆ ವಿಶ್ವಮಾನ್ಯತೆಯನ್ನೂ ಸಂಪತ್ತನ್ನೂ ಗಳಿಸಿ ಸುಖಲೋಲುಪತೆಯ ಬದುಕನ್ನು ಬದುಕಬಹುದಿತ್ತು; ಬಹಳವಾದರೆ ಅವರಿಂದ

ವಿಶ್ವಮಾನ್ಯ ಕಲಾಕೃತಿಗಳ ಬಳುವಳಿ ನಮಗೆ ದೊರೆಯಬಹುದಿತ್ತು; ಕರ್ನಾಟಕದ ಕಲಾಭಂಡಾರಕ್ಕೆ ಇನ್ನಷ್ಟು ಕಲಾಸಂಪತ್ತಿನ ಸೇರ್ಪಡೆ ಯಾಗಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ; ಬದಲಾಗಿ "ನನ್ನೊಬ್ಬನಿಂದ ಕನ್ನಡ ಕಲಾಲಕ್ಷ್ಮಿಯ ಸಂಪತ್ತು ಬೆಳೆಯುವುದು ಸಾಧ್ಯವಲ್ಲ; ನಾನು ಹಾಗೆ ಆಶೆಪಡುವುದು ಸಾಧುವೂ ಅಲ್ಲ. ಅದಕ್ಕೆ ಅಸಂಖ್ಯಾತ ಕಲಾವಿದರ ಕೈಗಳೇ ಆಗಬೇಕು. ನಾಡಿನ ನಾಲ್ಕೂ ನಿಟ್ಟನಿಂದ ಕಲಾವಿದರು ಹುಟ್ಟಿ ಬರಬೇಕು; ಅವರನ್ನು ಪ್ರಬುದ್ಧರನ್ನಾಗಿಸುವ ಕಲಾಶಾಲೆಗಳ ಸೃಷ್ಟಿಯಾಗಬೇಕು" - ಎಂದು ಆಶಿಸಿದರು. ಕನ್ನಡ ನಾಡಿನ ವೈಭವೋಪೇತ ಕಲಾಸಂಸ್ಕೃತಿಯ ಹಿರಿಮೆಯನ್ನು ನೆನೆಸಿಕೊಂಡರು. "ಹಿಂದಿನ ವೈಭವ ಇಂದು ಮಬ್ಬುಗವಿದು ಮಸುಕಾಗಿದೆ; ಕನ್ನಡದ ದೈತ್ಯ ಕಲಾಶಕ್ತಿ ಅದೇಕೆ ಉಡುಗಿತು? ಅದಕ್ಕೆ ಸರಿಯಾದ ಪೋಷಣೆಯನ್ನು ನೀಡುವಲ್ಲಿ ಕನ್ನಡದ ಉದಾರ ಕುಬೇರಶಕ್ತಿ ಅದೇಕೆ ಉಪೇಕ್ಷಿಸಿತು?" - ಎಂದು ಮುಂತಾಗಿ ಚಿಂತಿಸಿದರು. ಅದಕ್ಕಾಗಿ ಅವರ ಚಿತ್ತವೃತ್ತಿ ಅವರ ಜೀವನ ಪರ್ಯಂತ ತಪಿಸಿತು. ಸುಪ್ತ ಪ್ರತಿಭೆಗಳು ಪ್ರಜ್ವಲಿಸುವಂತೆ ಪ್ರೇರೇಪಿಸುವ ದಿವ್ಯ ಶಕ್ತಿಯಾಯಿತು. ತನ್ಮೂಲಕ ಕನ್ನಡ ನೆಲದ ಕಲೆಯ ಗಂಧ ಘಮಘಮಿಸುವಂತೆ ಪ್ರಚೋದಿಸುವ ಪ್ರೇರಕ ಶಕ್ತಿಯಾಯಿತು.

ಟಿ.ಪಿ. ಅಕ್ಕಿ ಅವರು ತಮ್ಮ ಶಿಕ್ಷಣವನ್ನು ಪೂರೈಸಿಕೊಂಡು ಗದುಗಿಗೆ ಬಂದ ಹೊಸತರಲ್ಲಿ ಉತ್ತರ ಕರ್ನಾಟಕದಲ್ಲಿ ಧಾರವಾಡದ ಹಿರಿಯ ಕಲಾವಿದ ಶ್ರೀ ಡಿ.ವಿ. ಹಾಲಭಾವಿ ಅವರ ಕಲಾಶಾಲೆ, ಹಳೆಯ ಮೈಸೂರು ಸಂಸ್ಥಾನದಲ್ಲಿ ಮೈಸೂರಿನ ಜಯಚಾಮರಾಜೇಂದ್ರ ತಾಂತ್ರಿಕ ಕಲಾ ಸಂಸ್ಥೆಗಳನ್ನು ಬಿಟ್ಟರೆ ಅಖಂಡ ಕರ್ನಾಟಕದ ಯಾವ ಭಾಗದಲ್ಲಿಯೂ ಕಲಾ ಶಿಕ್ಷಣವನ್ನು ನೀಡಬಲ್ಲ ಕಲಾಶಾಲೆಗಳೇ ಇರಲಿಲ್ಲ. ಕೈಬೆರಳಿನಲ್ಲಿ ಎಣಿಸಬಹುದಾದಷ್ಟು ಕಲಾವಿದ್ಯಾರ್ಥಿಗಳಿಂದಲೇ ಈ ಕಲಾಶಾಲೆಗಳು ತಮ್ಮ ಕೈಂಕರ್ಯವನ್ನು ಕೈಕೊಂಡಿದ್ದವು. ಕಲಾ ಶಿಕ್ಷಣದ ಈ ಕೊರತೆಯನ್ನು ತುಂಬುವುದು ಹೇಗೆ? ಎಂದು ಚಿಂತಿಸಿದ ಅಕ್ಕಿ ಗದುಗಿನಲ್ಲಿಯೇ ಒಂದು ಕಲಾಶಾಲೆಯನ್ನು ಸ್ಥಾಪಿಸುವ ನಿರ್ಧಾರವನ್ನು ಕೈಕೊಂಡರು. ಗದುಗಿನಂಥ ವ್ಯಾಪಾರೀ ಮನೋವೃತ್ತಿಯ ನಗರದಲ್ಲಿ ಕಲಾವಿದ್ಯಾರ್ಥಿಗಳು ಬಂದಾರೆಯೇ ಎಂದು ಚಿಂತಿಸುವ ಗೋಜಿಗೂ ಅವರು ಹೋಗಲಿಲ್ಲ. ಕೈಗೆ ಸಿಕ್ಕ ನಾಲ್ಕಾರು ವಿದ್ಯಾರ್ಥಿಗಳಿಂದಲೇ ಗದುಗಿನ

ಮುನಸಿಪಲ್ ಹೈಸ್ಕೂಲಿನ ಚಿತ್ರಕಲಾ ತರಗತಿಯ ಕೊಠಡಿಯಲ್ಲಿ ಕಲಾಶಾಲೆಯನ್ನು ಪ್ರಾರಂಭಿಸಿಯೇ ಬಿಟ್ಟರು. ಮುಂಬಯಿಯಿಂದ ಬಂದ ಈ ಕಲಾಶಿಕ್ಷಕ ಗದುಗಿನ ಕಲಾ ವಿದ್ಯಾರ್ಥಿಗಳಿಗೆ ಚೇತನಶಕ್ತಿ ದೇವತೆಯಾದರು. ಶ್ರೀಯುತರ ಹಸನ್ಮುಖ ವಾಕ್ಚಾತುರ್ಯ, ಸರಳ ಸೌಜನ್ಯತೆ-ಗಳಿಂದಾಗಿ ಮುನಸಿಪಲ್ ಹೈಸ್ಕೂಲಿನ ವಾತಾವರಣವೇ ಬದಲಾಯಿತು. ಇಲ್ಲಿಯೇ ಅಕ್ಕಿ ಅವರು ತಮ್ಮ ಸಾಧನೆಯ ಬುನಾದಿಯನ್ನು ಭದ್ರಪಡಿಸಿಕೊಂಡರು.

ಟಾಕಪ್ಪ ಪ್ರಭಪ್ಪ ಅಕ್ಕಿ ಎಂಬುದು ಟಿ.ಪಿ. ಅಕ್ಕಿ ಅವರ ಪೂರ್ಣ ಹೆಸರು. ತಂದೆಯವರು ಸೊರಟೂರಿನ ಸುಸಂಸ್ಕೃತ ಮನೆತನದ ಪ್ರಭಪ್ಪನವರು. ಕಂದಾಯ ಖಾತೆಯಲ್ಲಿ ಕರಣಿಕರಾಗಿ ಕೆಲಸ ಮಾಡುತ್ತಿದ್ದರಲ್ಲದೇ ಸಾಹಿತ್ಯಾರಾಧಕರೂ ಆಗಿ ಕಾವ್ಯ ನಾಟಕಾದಿಗಳ ಕರ್ತೃಗಳೂ ಆದ ಕಲೋಪಾಸಕರಾಗಿದ್ದರು. ತಾಯಿ ಮುದುಕಮ್ಮನವರು ಲಕ್ಷ್ಮೇಶ್ವರದ ಸಿರಿವಂತ ಸುಸಂಸ್ಕೃತ ಮನೆತನದ ಪುತ್ರಿಯಾಗಿ ಒಂಭತ್ತು ದಶಕಗಳ ಹಿಂದೆಯೇ ಮುಲ್ಕೀ ಪರೀಕ್ಷೆ (ಈಗಿನ ಏಳನೆಯ ತರಗತಿ. ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳು ಶಾಲೆ ಕಲಿಯುತ್ತಿದ್ದಾರೆಂದರೆ ಮಹಾ ಅಪರಾಧವನ್ನೇ ಮಾಡುತ್ತಿದ್ದಾರೆಂದು ಭಾವಿಸುವ ಕಾಲವಾಗಿತ್ತು)ಯನ್ನು ಪಾಸು ಮಾಡಿಕೊಂಡ ಸುಸಂಸ್ಕೃತ ಮಹಿಳೆ. ಪತಿಯ ಅಕಾಲ ಮರಣದಿಂದಾದ ಆಘಾತವನ್ನು ನುಂಗಿಕೊಂಡು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವರನ್ನು ಸುಸಂಸ್ಕೃತರನ್ನಾಗಿ ಮಾಡಲು ಅವಿರತವಾಗಿ ಶ್ರಮಿಸಿ ಅವರ ಉತ್ಕರ್ಷವನ್ನು ಕಣ್ಣಾರೆ ಕಂಡು ಶಿವ ಸಾಯುಜ್ಯವನ್ನು ಪಡೆದ ಆದರ್ಶ ಸ್ತ್ರೀರತ್ನ. ಅಂಥ ಮಾತಾಪಿತರ ಮೂರನೆಯ ಮಗನಾಗಿ ಕ್ರಿ.ಶ. ಸಾವಿರದ ಒಂಭೈನೂರ ಎಂಟನೆಯ ಡಿಶೆಂಬರ ಮೂವತ್ತೊಂದರಂದು ಟಿ.ಪಿ. ಅಕ್ಕಿಯವರು ತಾಯಿಯವರ ಊರಾದ ಲಕ್ಷ್ಮೇಶ್ವರದಲ್ಲಿಯೇ ಜನಿಸಿದರು.

ಪ್ರಭಪ್ಪನವರಿಗೆ ನಾಲ್ಕು ಜನ ಗಂಡುಮಕ್ಕಳು ಹಾಗೂ ಒಬ್ಬ ಪುತ್ರಿ. ಹಿರಿಯ ಮಗ ಶಂಕರಪ್ಪ ಭಾವಿಕಟ್ಟಿಯವರ ಮನೆತನಕ್ಕೆ ದತ್ತಕ ಪುತ್ರನಾಗಿ ಹೋದರು. ಎರಡನೆಯ ಮಗ ಶಿವಾನಂದ ಮೂರನೆಯ ಮಗ ಟಾಕಪ್ಪ. ನಾಲ್ಕನೆಯ ಮಗ ಈಶ್ವರಪ್ಪ. ಚಂಪಾಬಾಯಿ ಮಗಳು. ತುಂಬುಸಂಸಾರ. ಟಿ.ಪಿ. ಅಕ್ಕಿ ಅವರು ಒಂಭತ್ತು ವರುಷದ ಬಾಲಕನಾಗಿರುವಾಗಲೇ ತಂದೆ ಪ್ರಭಪ್ಪನವರು ಶಿವ ಸಾಯುಜ್ಯವನ್ನು ಪಡೆದರು. ಅಂದಿನಿಂದಲೇ ಪ್ರಾರಂಭವಾಯಿತು ಅಕ್ಕಿ ಮನೆತನದ ಹೋರಾಟದ ಬದುಕು. ಆಗ ಅಕ್ಕಿ ಮನೆತನದ ವಾಸ್ತವ್ಯ ಗದುಗಿನಲ್ಲಿ



ಜಾತ್ರಾ - ಶಿರಹಟ್ಟಿ

Jatra - Sirahatti

ತಂದೆ ಪ್ರಭಪ್ಪನವರ ಆಪ್ತ ಸ್ನೇಹಿತರಾದ ಶ್ರೀ ಹುಬಳಿ ಸಾಹೇಬರ ಮೇಲ್ವಿಚಾರಣೆಯಲ್ಲಿ ಟಾಕಪ್ಪ, ಶಿವಾನಂದ ಹಾಗೂ ಈಶ್ವರಪ್ಪ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಗದುಗಿನಲ್ಲಿಯೇ ಪೂರೈಸಿದರು. ಕಾರಣಾಂತರಗಳಿಂದ ಹುಬ್ಬಳ್ಳಿಗೆ ಹೋಗಬೇಕಾಗಿ ಬಂದುದರಿಂದ ಅಕ್ಕಿಯವರ ಮನೆತನ ಕೆಲವು ದಿವಸ ಹುಬ್ಬಳ್ಳಿಯಲ್ಲಿಯೇ ವಾಸ್ತವ್ಯ ಮಾಡಬೇಕಾಯಿತು. ಅಣ್ಣ-ತಮ್ಮಂದಿರ ಮಾಧ್ಯಮಿಕ ಶಿಕ್ಷಣವು ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ನಡೆಯತೊಡಗಿತು. ಅಣ್ಣ ಶಿವಾನಂದ ಅಕ್ಕಿ ತಮ್ಮ ಮ್ಯಾಟ್ರಿಕ್ ಪರೀಕ್ಷೆ ಮುಗಿದ ನಂತರ ಮುಂಬಯಿಯ ಜೆ.ಜೆ. ಕಲಾಶಾಲೆಯನ್ನು ಸೇರಿ ಉಚ್ಚ ಕಲಾಶಿಕ್ಷಣವನ್ನು ಪಡೆಯತೊಡಗಿದರು. ಉಚ್ಚ ಕಲಾಶಿಕ್ಷಣದ ಉನ್ನತ ಪದವಿಯಾದ ಆರ್ಟ್ ಮಾಸ್ಟರ್ ತರಗತಿಯನ್ನು ಉನ್ನತ ದರ್ಜೆಯಲ್ಲಿಯೇ ಪಾಸುಮಾಡಿದರು. ಉತ್ತರ ಕರ್ನಾಟಕ ಭಾಗದಿಂದ ಮುಂಬೈಯಲ್ಲಿ ಕಲಾಶಿಕ್ಷಣವನ್ನು ಪೂರೈಸಿದವರಲ್ಲಿ ಪ್ರಾಯಶಃ ಶಿವಾನಂದ ಅಕ್ಕಿಯವರೇ ಪ್ರಥಮರಾಗಿದ್ದರು. ತಾಯಿ ಮುದುಕಮ್ಮ ಹಿಗ್ಗಿ ಹೀರೇಕಾಯಿಯಾದರು; ''ನನ್ನ ಕಷ್ಟದ ದಿನಗಳು ಕೊನೆಗೊಂಡವೆಂದು'' ಮನದಲ್ಲಿಯೇ ಮಲ್ಲಿಕಾರ್ಜುನನನ್ನು ಸಹಸ್ರಬಾರಿ ವಂದಿಸಿದರು. ಈ ವೇಳೆಗೆ ಟಾಕಪ್ಪ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದರು.

ಶಿವಾನಂದ ಅಕ್ಕಿ ಅದ್ಭುತ ಚಿತ್ರಕಾರರಾಗಿ ರೂಪುಗೊಂಡು ಕನ್ನಡನಾಡಿಗೂ ಚಿತ್ರಕಲಾಕ್ಷೇತ್ರಕ್ಕೂ ಕೀರ್ತಿತಂದ ಮಹಾನ್ ಕಲಾವಿದನೆಂದು ಜೆ.ಜೆ. ಕಲಾಶಾಲೆಯ ಅವರ ಗುರುವೃಂದ ಅವರನ್ನು ಕೊಂಡಾಡಿತ್ತು. ಇದೇ ಹುಮ್ಮಸ್ಸಿನಲ್ಲಿಯೇ ಶಿವಾನಂದ ಅಕ್ಕಿ ಮುಂಬಯಿಯಲ್ಲಿ ತಮ್ಮದೇ ಆದ ಕಲಾಶಾಲೆಯನ್ನು ಪ್ರಾರಂಭಿಸಿದ್ದರು. ಒಳ್ಳೆಯ ಕಲಾವಿದನೆಂದು ಖ್ಯಾತಿವೆತ್ತ ಶಿವಾನಂದ ಅಕ್ಕಿ ಅವರು ತಾಯಿ-ತಮ್ಮಂದಿರನ್ನೆಲ್ಲ ಮುಂಬಯಿಗೆ ಕರೆಸಿಕೊಂಡರು. ಸಾವಿರದ ಒಂಭೈನೂರ ಇಪ್ಪತ್ತೈದರಲ್ಲಿ ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸುಮಾಡಿಕೊಂಡ ಟಾಕಪ್ಪ ಕರ್ನಾಟಕ ಕಾಲೇಜನ್ನು ಬಿಟ್ಟು ಮುಂಬಯಿಯ ವಿಲ್ಸನ್ ಕಾಲೇಜನ್ನು ಸೇರಿದರು. ನಂತರ ವಾಣಿಜ್ಯ ಪದವಿ ಡಿಪ್ಲೋಮಾ ಇನ್ ಅಕೌಂಟೆನ್ಸಿ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಸಿಡನ್ಹ್ಯಾಮ್ ಕಾಲೇಜನ್ನು ಸೇರಿದರು ..... ಮುಂದೆ ಕರ್ನಾಟಕದ ಘನವಂತನಾದ ಕಲಾಚಾರ್ಯನಾಗಬೇಕಿದ್ದ ಟಾಕಪ್ಪ ವಾಣಿಜ್ಯ

ಪದವೀಧರನಾಗಲು ಯೋಚಿಸಿದ್ದು ಎಷ್ಟೊಂದು ವಿಚಿತ್ರವಾಗಿದೆಯಲ್ಲವೇ? ಅದೇಕೆ ಅವರು ವಾಣಿಜ್ಯ ಪದವಿಯನ್ನು ಪೂರೈಸಲಿಲ್ಲ! ? ಕಲಾಕ್ಷೇತ್ರಕ್ಕೆ ಬರಬೇಕಾದ ಅಗತ್ಯವೇನಿರಬಹುದು ? ಮುಂಬಯಿಯಲ್ಲಿ ಕಲಾಶಾಲೆಯನ್ನು ನಡೆಸುತ್ತಿದ್ದ ಶಿವಾನಂದ ಅಕ್ಕಿಯವರು ಕಲಾಶಾಲೆಯನ್ನು ನಡೆಸುತ್ತಲೇ ಯಾವುದಾದರೂ ಒಂದು ನಾಕರಿಯನ್ನೂ ಮಾಡುತ್ತಿರಬೇಕೆಂದು ಯೋಚಿಸಿದ್ದರು. ಅದಕ್ಕಾಗಿ ತಮ್ಮ ಗುರುಗಳಾದ ಎಂ.ವಿ. ಧುರಂಧರ ಅವರನ್ನು ಕಂಡು ತಮ್ಮ ತೊಂದರೆಗಳನ್ನು ಅವರೆದುರು ತೋಡಿಕೊಂಡಿದ್ದರು. ಗುರುಗಳು ಶಿಷ್ಯವಾತ್ಸಲ್ಯದಿಂದ ಬೆನ್ನುತಟ್ಟಿ "ನೀನು ಕಲಾಶಾಲೆಯನ್ನೂ ನಡೆಸುತ್ತಿರು; ನೌಕರಿಯನ್ನೂ ಮಾಡುತ್ತಿರು. ನಿನ್ನ ಬದುಕು ಅರ್ಥವತ್ತಾಗಲಿ; ಸುಂದರವಾಗಲಿ; ನಿನಗಾಗಿ ನಾನು ನೌಕರಿಗಾಗಿ ಪ್ರಯತ್ನಿಸುತ್ತೇನೆ. ಯಾವ ಸಂಕೋಚಕ್ಕೂ ಒಳಗಾಗಬೇಡ; ನಿನ್ನ ಉತ್ಸಾಹ ಕುಗ್ಗದಿರಲಿ".-ಎಂದು ಹಾರೈಸಿದ್ದರು. ಶಿಷ್ಯ ಶಿವಾನಂದನ ಬದುಕು ಅರ್ಥವತ್ತಾಗಿರುವದನ್ನೂ ಸುಂದರವಾಗಿರುವದನ್ನೂ ನೋಡುವ ಧುರಂಧರರ ಆಶೆ ವಿಧಿಯ ಮನಸ್ಸಿಗೆ ಬರಲಿಲ್ಲವೆಂದು ಕಾಣುತ್ತದೆ. ಧುರಂಧರರ ಪ್ರಯತ್ನ ನಿಷ್ಫಲವಾದಾಗ ಶಿಷ್ಯ ಶಿವಾನಂದನನ್ನು ಕರೆದು ಹೇಳಿದರು - "ಶಿವಾನಂದ, ನಿನಗಾಗಿ ನಾನು ಸಾಕಷ್ಟು ಪ್ರಯತ್ನಿಸಿದೆ. ಸಧ್ಯ ನಿನಗೆ ನೌಕರಿ ಸಿಗುವ ಸಂಭವವಿಲ್ಲ. ಧೈರ್ಯ ಸ್ಥೈರ್ಯಗಳಿಂದಲೇ ನಿನ್ನ ಕಲಾಶಾಲೆಯನ್ನು ನಡೆಸಿಕೊಂಡು ಹೋಗು. ನೌಕರಿಗಾಗಿ ಇನ್ನೂ ಪ್ರಯತ್ನಿಸೋಣ; ದೇವರಿದ್ದಾನೆ."-ಗುರುಗಳ ಅಸಹಾಯಕತೆಯನ್ನು ತಿಳಿದ ಶಿವಾನಂದ ಮೌನಿಯಾಗಿ ಮರಳಿ ಮನೆಗೆ ಬಂದ. ಬುದ್ಧಿಸ್ಥಿಮಿತದಲ್ಲುಳಿಯಲಿಲ್ಲ. ಶಿವಾನಂದನ ಕನಸು ಕ್ಷಣಮಾತ್ರದಲ್ಲಿ ಕತ್ತರಿಸಿ ಹೋಯಿತು. ತನಗೆ ನೌಕರಿ ಸಿಗುವ ಮಾತು ಕನ್ನಡಿಯೊಳಗಿನ ಗಂಟಾಯಿತು ಎಂದು ತಿಳಿದಾಗ ಶಿವಾನಂದ ಸಂಪೂರ್ಣವಾಗಿ ಬುದ್ಧಿ ಭ್ರಮಣೆಗೊಳಗಾಗಿದ್ದ; ಅವನಿಗೆ ಹುಚ್ಚು ಹಿಡಿದಿತ್ತು. ಉಪಚಾರಗಳೆಲ್ಲ ನಿಷ್ಫಲಗೊಂಡವು. ಮನೆತನದ ಸ್ಥಿತಿ ಹದಗೆಡುತ್ತ ನಡೆಯಿತು. ತೀರ ಚಿಂತಾಜನಕ ಸ್ಥಿತಿಗೆ ನಿಂತಿತು. ಅಕ್ಕಿ ಅವರ ಮನೆತನಕ್ಕೆ ಬರಸಿಡಿಲು ಬಡಿದಂತಾಯಿತು. ತಮ್ಮಂದಿರಾದ ಟಾಕಪ್ಪ ಮತ್ತು ಈಶ್ವರಪ್ಪ ನಿರುಪಾಯರಾಗಿ ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಬದುಕಿನ ಸಮಸ್ಯಾಪರಿಹಾರ ಮಾರ್ಗ ವನ್ನರಸತೊಡಗಿದರು. ಗುಜರಾತಿನ ನವಸಾರಿ, ವಸಯಿ, ಮುಂತಾದ

ಅನ್ಯಭಾಷಾ ಪ್ರದೇಶಗಳಲ್ಲಿ ಸಿಕ್ಕ ಸಿಕ್ಕ ನೌಕರಿಯನ್ನು ಮಾಡಬೇಕಾಯಿತು. ಈ ಘಟನೆ ನಡೆದುದು ಸಾವಿರದ ಒಂಭೈನೂರಾ ಮೂವತ್ತರಲ್ಲಿ.

ಇದೇ ಅವಧಿಯಲ್ಲಿಯೇ ಜೆ.ಜೆ. ಕಲಾಶಾಲೆಯಲ್ಲಿ ಕಲಿತು ಟಿ.ಪಿ. ಅಕ್ಕಿ ಅವರು ಆರ್ಟ್‌ಮಾಸ್ಟರ್ ಪದವಿಯನ್ನೂ ಈಶ್ವರಅಕ್ಕಿ ಅವರು ಡ್ರಾಯಿಂಗ್‌ಟೀಚರ್ಸ್ ಕೋರ್ಸನ್ನೂ ಮುಗಿಸಿಕೊಂಡಿದ್ದರು. ಅನ್ಯಭಾಷಾ ಪ್ರಾಂತ್ಯಗಳಲ್ಲಿ ಜೀವನ ನಿರ್ವಹಣೆ ಕಷ್ಟಸಾಧ್ಯವೆಂದರಿತ ಸೋದರರಿಬ್ಬರೂ "ಹುಚ್ಚು ಹಿಡಿದ" ಅಣ್ಣನನ್ನೂ ತಾಯಿಯನ್ನೂ ಕರೆದುಕೊಂಡು ಮರಳಿ ಕನ್ನಡ ನಾಡಿಗೇ ಹೋಗುವದೆಂದು ತೀರ್ಮಾನಿಸಿದರು. ಜನ್ಮಕೊಟ್ಟ ಕನ್ನಡ ಜನನಿ ಖಂಡಿತವಾಗಿಯೂ ನಮ್ಮನ್ನು ಕೈಬಿಡಲಾರಳು; ನಮ್ಮ ಸೇವೆ ಕನ್ನಡ ಭುವನೇಶ್ವರಿಗೇ ಸಲ್ಲಬೇಕಾದುದು ಸಾಧುವಾಗಿದೆ. ಭುವನೇಶ್ವರಿಯ ಋಣವನ್ನಂತೂ ನಾವು ತೀರಿಸಲೇ ಬೇಕು. ಆ ಭಾಗ್ಯದಿಂದ ನಾವು ವಂಚಿತರಾಗಬಾರದು ಎಂದು ಮುಂತಾಗಿ ಚಿಂತಿಸಿದರು. ಅಕ್ಕಿಯವರ ಕುಟುಂಬ ತಾಯ್ನಾಡಿಗೆ ಮರಳಿತು. ನೇರವಾಗಿ ಗದುಗಿಗೆ ಬಂದಿಳಿಯಿತು. ಟಿ.ಪಿ. ಅಕ್ಕಿ ಅವರು ಮುನಸಿಪಲ್ ಹೈಸ್ಕೂಲಿನಲ್ಲಿಯೂ ಸೋದರ ಈಶ್ವರಪ್ಪ ಅಕ್ಕಿ ಅವರು ಮುನಸಿಪಲ್ ಸ್ಕೂಲ ಬೋರ್ಡಿನವರು ನಡೆಸುತ್ತಿದ್ದ ಪ್ರಾಥಮಿಕ ಶಾಲೆಗಳಲ್ಲಿಯೂ (ಸುಮಾರು ಆರೇಳು ಶಾಲೆಗಳಿಗೆ ಒಬ್ಬರೇ ಚಿತ್ರಕಲಾ ಶಿಕ್ಷಕ) ಚಿತ್ರಕಲಾ ಶಿಕ್ಷಕರಾಗಿ ಸೇವೆಯಲ್ಲಿ ತೊಡಗಿದರು.

ಟಿ.ಪಿ. ಅಕ್ಕಿ ಗದುಗಿನ ಐತಿಹಾಸಿಕ ಮಹತಿಯನ್ನು ತಿಳಿದವರಾಗಿದ್ದರು. ಚಾಲುಕ್ಯರು, ಹೊಯ್ಸಳರು ನಿರ್ಮಿಸಿದ ಭವ್ಯವೂ ಸುಂದರವೂ ಕಲಾತ್ಮಕವೂ ಆದ ದೇವಾಲಯಗಳು ಟಿ.ಪಿ. ಅವರ ಮನಸ್ಸನ್ನು ಸೆಳೆದವು; ಲಕ್ಕುಂಡಿ, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಐತಿಹಾಸಿಕ ಸ್ಥಳಗಳು ಅಕ್ಕಿಯವರಿಗೆ ತೀರ ಕಣ್ಣು ಮುಂದೆಯೇ ಸುಳಿದಾಡಿದಂತಾಯಿತು. ಈ ದಿಶೆಯಲ್ಲಿ ಗದುಗು ಅಥವಾ ಹಿಂದಿನ ಕೃತಪುರದ ನೆಲೆಯು ಎಷ್ಟೊಂದು ಪ್ರಶಸ್ತವಾಗಿದೆ. ಇಲ್ಲಿಯೇ ಕಲಾಶಿಕ್ಷಣವನ್ನು ನೀಡಬಲ್ಲ ಒಂದು ಕಲಾಶಾಲೆಯನ್ನು ಸ್ಥಾಪಿಸುವದು ನಿಜಕ್ಕೂ ಒಂದು ಮಹತ್ಕೃತಿಯೆನಿಸೀತು. ಇಲ್ಲಿನ ಪರಿಸರ ಈ ಸಾಹಸಕ್ಕೆ ಪೂರಕವಾಗಿದೆ"-ಎಂಬ ಕನಸನ್ನು ಟಿ.ಪಿ. ಅಕ್ಕಿ ಅವರು ಅಂದೇ ಕಟ್ಟಿಕೊಂಡರು. ಕಲಾಶಿಕ್ಷಣ, ಕಲೆ ಮುಂತಾದ ನಿಗೂಢ ವಿದ್ಯೆಯನ್ನು ಸಂಪೂರ್ಣವಾಗಿ ಮರೆತುಹೋದ ಜನತೆಯಲ್ಲಿ ಕಲಾಪ್ರಜ್ಞೆಯನ್ನು

ಮೂಡಿಸುವುದು ಹೇಗೆ? ಎಂಬ ಸಮಸ್ಯೆ ಟಿ.ಪಿ. ಅವರನ್ನು ಕಾಡತೊಡಗಿತು. ಮಾಧ್ಯಮಿಕ ಶಾಲಾ ಮಟ್ಟದಲ್ಲಿ ನಡೆಯುತ್ತಿದ್ದ ಎಲಿಮೆಂಟರಿ ಹಾಗೂ ಇಂಟರ್‌ಮಿಡಿಯೇಟ್ ಚಿತ್ರಕಲಾ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳನ್ನು ಅಣಿಗೊಳಿಸಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಸಾಗುವಂತೆ ತರಬೇತಿ ನೀಡತೊಡಗಿದರು. ಪ್ರತಿವರುಷ ಮೂರು ನೂರರಿಂದ ನಾಲ್ಕು ನೂರರ ವರೆಗಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಕ್ಕಿ ಅವರನ್ನು ಸುತ್ತುವರಿಯ ತೊಡಗಿದರು. ಅಕ್ಕಿಯವರ ವಾತ್ಸಲ್ಯಮಯ ಪ್ರೇರಣೆಯಿಂದಾಗಿ ವಿದ್ಯಾರ್ಥಿಗಳಲ್ಲಿಯೂ ಸಹೋದ್ಯೋಗಿಗಳಲ್ಲಿಯೂ ಆತ್ಮೀಯತೆಯು ಗಾಢವಾಗಿ ಬೆಳೆಯತೊಡಗಿತು. ಗ್ರೇಡ್ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ವಿಷಯವಾಗಿ ಅಕ್ಕಿಯವರು ಪತ್ರಿಕಾ ಪ್ರಚಾರವನ್ನು ನೀಡಿ, ವಿದ್ಯಾರ್ಥಿಗಳ ಉತ್ಸಾಹಕ್ಕೆ ಇನ್ನಷ್ಟು ಉತ್ತೇಜನವನ್ನು ನೀಡಿ ಹೆಚ್ಚಿನ ವ್ಯಾಸಂಗಕ್ಕಾಗಿ ಹಾತೊರೆಯುವಂತೆ ಮಾಡುತ್ತಿದ್ದರಲ್ಲದೇ ವಿದ್ಯಾರ್ಥಿಗಳ ತಂದೆ-ತಾಯಿಗಳನ್ನೂ ಪೋಷಕರನ್ನೂ ಕರೆಸಿ ಅವರ ಮಕ್ಕಳು ಹೆಚ್ಚಿನ ಕಲಾ ವ್ಯಾಸಂಗವನ್ನು ಮುಂದುವರೆಸಿಕೊಂಡು ಹೋಗಲು ಅನುವು ಮಾಡಿಕೊಡುವಂತೆ ಪ್ರೇರೇಪಿಸುತ್ತಿದ್ದರು. ಹೀಗಾಗಿ ಕೆಲವೇ ದಿನಗಳಲ್ಲಿ ವಿದ್ಯಾರ್ಥಿಗಳ ಕಲಾಪ್ರಜ್ಞೆ ದ್ವಿಗುಣಗೊಂಡಿತು. ಅಕ್ಕಿ ಅವರಿಗೆ ಕಲಾಶಾಲೆಯ ಪ್ರಾರಂಭಕ್ಕೆ ಕಾಲ ಪಕ್ವವಾಗಿದೆ ಎಂದೆನಿಸಿತು. ಕೇವಲ ಕೆಲವೇ ವಿದ್ಯಾರ್ಥಿಗಳಿಂದ ಹೈಸ್ಕೂಲಿನಲ್ಲಿ ಉಚ್ಚ ಕಲಾ ತರಗತಿಯನ್ನು ಪ್ರಾರಂಭಿಸಿಯೇ ಬಿಟ್ಟರು. ಸಾವಿರದ ಒಂಭೈನೂರ ನಲ್ವತ್ತೇಳರಲ್ಲಿ ಪ್ರಾರಂಭಿಸಿದ ಈ ಕಲಾಶಾಲೆಗೆ ತಮ್ಮ ಗತಿಸಿದ ಪುತ್ರ ''ವಿಜಯ'' ನ ಹೆಸರನ್ನೇ ಸ್ಥಿರಗೊಳಿಸಿ ''ವಿಜಯ ಕಲಾ ಮಂದಿರ'' ಎಂಬ ಹೆಸರನ್ನಿಟ್ಟರು. ಕಮಾನಗಾರ, ಪಿಂಜಾರ, ಮುತ್ತೂರ, ಕಂಬಿಮಠ ಇವೇ ನಾಲ್ಕು ಜನ ಉಚ್ಚಕಲಾ ಶಿಕ್ಷಣಕ್ಕೆ ಬಂದ ವಿದ್ಯಾರ್ಥಿಗಳು ನಂತರ ಕರ್ನಾಟಕ ರಾಜ್ಯದ ಅಸಿಸ್ಟಂಟ್ ಡಿ.ಪಿ.ಐ (ಡ್ರಾಯಿಂಗ್) ಆಗಿ ನಿವೃತ್ತರಾಗಿ ಇತ್ತೀಚೆಗೆ ನಿಧನರಾದ ಎಸ್. ಜಿ. ಗೂಳಣ್ಣನವರ ಅವರು ಕಲಾವಿದ್ಯಾರ್ಥಿಗಳ ಬಳಗದಲ್ಲಿ ಸೇರಿಕೊಂಡರು. ಹೀಗೆ ವಿಜಯ ಕಲಾಮಂದಿರವು ಗದುಗಿನಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಅದೇ ವರುಷವೇ ಭಾರತ ಪಾರತಂತ್ರ್ಯ ಸಂಕೋಲೆಯನ್ನು ಕಳಚಿಕೊಂಡು ಸರ್ವತಂತ್ರ ಸ್ವಾತಂತ್ರ್ಯವನ್ನು ಪಡೆಯಿತು. ಭಾರತಕ್ಕೆ ದೊರೆತ ಸಂಭ್ರಮದಿಂದ ಅಕ್ಕಿ ಅವರು ಇನ್ನಷ್ಟು ಉತ್ತೇಜಿತರಾದರು.

ಆಗ ಅಂದರೆ ಸಾವಿರದ ಒಂಭೈನೂರ ನಾಲ್ವತ್ತರ ದಶಕದಲ್ಲಿ ಧಾರವಾಡ, ಬೆಳಗಾಂ, ಕಾರವಾರ ಹಾಗೂ ಬಿಜಾಪೂರ ಜಿಲ್ಲೆಗಳು ಮುಂಬಯಿ ಪ್ರಾಂತಾಧಿಕಾರಕ್ಕೊಳಪಟ್ಟ ಜಿಲ್ಲೆಗಳಾಗಿದ್ದವು. ಮುಂಬಯಿಯ ಸರ್.ಜೆ.ಜೆ. ಕಲಾಶಾಲೆಯು ಮಾತ್ರ ಮುಂಬಯಿ ಸರಕಾರದ ಕಲಾಶಿಕ್ಷಣ ಕೇಂದ್ರವಾಗಿತ್ತು. ಮುಂಬಯಿ ಪ್ರಾಂತದ ಯಾವುದೇ ಸ್ಥಳದಲ್ಲಿದ್ದ ಕಲಾಶಾಲೆಗಳು ತಮ್ಮ ವಿದ್ಯಾರ್ಥಿಗಳನ್ನು ಪ್ರತಿಯೊಂದು ಪರೀಕ್ಷೆಗೂ ಅಂದರೆ ಉಚ್ಚ ಕಲಾ ತರಗತಿಗಳಾದ ಎಲಿಮೆಂಟರಿ ಪೇಂಟಿಂಗ್‌ನಿಂದ ಮೊದಲುಗೊಂಡು ಗವರ್ನಮೆಂಟ್ ಡಿಪ್ಲೋಮಾ ಪೇಂಟಿಂಗ್ ಪರೀಕ್ಷೆಗಳ ವರೆಗೂ ಮುಂಬಯಿಗೇ ಕಳಿಸಬೇಕಾಗುತ್ತಿತ್ತು. ಅಲ್ಲದೇ ಪ್ರತಿ ಪರೀಕ್ಷೆಗೂ ಜೆ.ಜೆ. ಕಲಾಶಾಲೆಯು ಅನುಮತಿಯನ್ನು ಕೊಟ್ಟನಂತರವೇ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶದೊರೆಯುತ್ತಿತ್ತು. ಹೀಗಾಗಿ ಉಚ್ಚ ಕಲಾವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ದುರ್ಬಲವಾಗಿರುತ್ತಿತ್ತು. ಅಕ್ಕಿಯವರಲ್ಲಿ ಕಲಿಯಲು ಬರುತ್ತಿದ್ದ ಅನೇಕ ವಿದ್ಯಾರ್ಥಿಗಳು ತೀರ ಬಡತನದ ಸಂಸಾರಗಳಿಂದ ಬಂದವರಾಗಿರುತ್ತಿದ್ದರು. ಕೆಲವೇ ಸಿರಿವಂತರ ಮಕ್ಕಳು ''ಮುಂಬಯಿ ಪಟ್ಟಣವನ್ನು ನೋಡುವ ಹವ್ಯಾಸ''ದಿಂದ ಉಚ್ಚ ಕಲೆಯನ್ನು ಕಲಿಯಲು ಬರುತ್ತಿದ್ದರಾಗಲೀ ''ಕಲೆಯನ್ನು ಕಲಿಯುವ ಹಸಿವಿ''ನಿಂದ ದೂರವಾಗಿರುತ್ತಿದ್ದರು. ಈ ಅಡಚಣೆಗಳಿಂದಾಗಿ ಅಕ್ಕಿಯವರ ಉತ್ಸಾಹ ಕುಗ್ಗುತ್ತಿರುವುದನ್ನು ಗಮನಿಸಿದ ಮುಂಬಯಿಯಲ್ಲಿಯೇ ನೆಲೆಸಿ ''ನೂತನ ಕಲಾಮಂದಿರ''ವನ್ನು ವೈಭವದಿಂದ ನಡೆಸಿಕೊಂಡು ಹೋಗುತ್ತಿದ್ದ ಕನ್ನಡಿಗ ಕಲಾಗುರು ಜಿ.ಎಸ್. ದಂಡಾವತಿಮಠ ಅವರು ಅಕ್ಕಿಯವರಲ್ಲಿ ಮತ್ತೆ ಧೈರ್ಯ ಸ್ಥೈರ್ಯಗಳನ್ನು ತುಂಬಿ ಕಾರ್ಯ ಪ್ರವೃತ್ತರಾಗುವಂತೆ ಚೈತನ್ಯವನ್ನು ನೀಡಿದರು.

ವಿಜಯ ಕಲಾಮಂದಿರವು ಸರಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸುವಲ್ಲಿ ಸಮರ್ಥ ಡಿಪ್ಲೋಮಾ ಹಾಗೂ ಆರ್ಟ್‌ಮಾಸ್ಟರ್ ಪದವೀಧರನಾದ ಇನ್ನೊಬ್ಬ ಕಲಾಶಿಕ್ಷಕನ ಅವಶ್ಯಕತೆ ತಲೆದೋರಿದಾಗ ಸಿ.ಎನ್. ಪಾಟೀಲ ಅವರು ಅಕ್ಕಿಯವರ ಕಣ್ಣಿಗೆ ಬಿದ್ದರು. ಸಿ.ಎನ್. ಪಾಟೀಲರು ಬಡತನದ ಕುಟುಂಬದಿಂದ ಬಂದವರಾಗಿದ್ದರೂ ಅವರಲ್ಲಿ ಸುಪ್ತವಾಗಿದ್ದ ಕಲಾಶಕ್ತಿಯು ಶ್ರೀ ಅಕ್ಕಿಯವರಿಗೆ ಸ್ಪಷ್ಟವಾಗಿ ಗೋಚರಿಸಿತು. ಸಿ.ಎನ್. ಪಾಟೀಲರನ್ನು ಮುಂಬಯಿಯ ಜೆ.ಜೆ. ಕಲಾಶಾಲೆಗೇ ಕಳುಹಿಸಬೇಕು,'' ವಿಧ್ಯುಕ್ತವಾದ ಕಲಾಶಿಕ್ಷಣ ಅವನಿಗೆ

ದೊರೆತಲ್ಲಿ ಅವನೊಬ್ಬ ಅತ್ಯುತ್ತಮ ಕಲಾವಿದನಾಗಬಲ್ಲ. ಮುಂದೆ ವಿಜಯ ಕಲಾಮಂದಿರಕ್ಕೆ ಕಲಿಯಲು ಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬಲ್ಲ''-ಎಂಬುದನ್ನು ತಿಳಿದ ಅಕ್ಕಿ ಅವರು ಪ್ರಯತ್ನ ಮಾಡಿ ಸಿರಸಂಗಿ ಲಿಂಗರಾಜ ದತ್ತಿಯ ಶಿಷ್ಯವೇತನವು ಸಿ.ಎನ್. ಪಾಟೀಲರಿಗೆ ದೊರೆಯುವಂತೆ ಮಾಡಿ ಪಾಟೀಲರನ್ನು ಮುಂಬಯಿಗೆ ಕಳಿಸಿಕೊಟ್ಟರು. ಮೇಧಾವಿಯಾದ ಸಿ.ಎನ್. ಸುಲಭವಾಗಿಯೇ ಜೆ.ಜೆ. ಕಲಾಶಾಲೆಯಲ್ಲಿ ಕಲಿಯಲು ಅವಕಾಶ ದೊರಕಿಸಿಕೊಂಡರು. ವಿಶ್ವ ವಿಖ್ಯಾತ ಕಲಾವಿದರೆಂದು ಖ್ಯಾತರಾದ ವಿ.ಬಿ. ಪರಬ, ಲಕ್ಷ್ಮಣ ಪೈ, ಫೋಪಳೆ, ಅಕಬರ ಪದಮಶಿ, ಸ್ವಸ್ತಿಕ್, ಭಾವೆ ಮುಂತಾದ ಪ್ರಭೃತಿಗಳ ಸಹಪಾಠಿಯಾಗಿ ಜೆ.ಜೆ. ಕಲಾಶಾಲೆಯ ಕಣ್ಮಣಿಯಾಗಿದ್ದರು. ಸಾವಿರದ ಒಂಭೈನೂರ ನಲ್ವತ್ತೊಂಭತ್ತರಲ್ಲಿ ಉನ್ನತ ಕಲಾವ್ಯಾಸಂಗದ ಅಡ್ವಾನ್ಸ್ ಪರೀಕ್ಷೆಯನ್ನೂ ಚಿತ್ರಕಲಾ ಶಿಕ್ಷಕ ತರಬೇತಿಯನ್ನು ಉನ್ನತ ಶ್ರೇಣಿಯಲ್ಲಿಯೇ ಪಾಸಾಗಿ ಸಿ.ಎನ್. ಪಾಟೀಲ ಗದುಗಿಗೆ ಮರಳಿ ಬಂದರು. ಈ ವೇಳೆಗಾಗಲೇ ಟಿ.ಪಿ. ಅಕ್ಕಿ ಅವರ ವಿಜಯ ಕಲಾಮಂದಿರಕ್ಕೆ ಒಂದು ಮಸುಕಾದ ರೂಪು ಬಂದಿತ್ತು. ಟಿ.ಪಿ. ಅಕ್ಕಿ ಅವರು ಕಲಾಮಂದಿರದ ಪ್ರಾಚಾರ್ಯಪಟ್ಟವನ್ನು ಸಿ.ಎನ್. ಪಾಟೀಲರಿಗೇ ಕಟ್ಟಿದರು. ಸಿ.ಎನ್. ಪಾಟೀಲರ ಸೃಜನಶೀಲ ಪ್ರತಿಭೆ ವಿಜಯ ಕಲಾಮಂದಿರಕ್ಕೆ ಬರುವ ಕಲಾವಿದ್ಯಾರ್ಥಿಗಳ ಮೇಲೆ ಬಹುವಾದ ಪ್ರಭಾವ ಬೀರಿತು. ತತ್ಪರಿಣಾಮವಾಗಿ ವಿದ್ಯಾರ್ಥಿಗಳ ಸಂಖ್ಯೆ ಆರರಿಂದ ಹತ್ತಕ್ಕೇರಿತು.

ವಿದ್ಯಾರ್ಥಿಗಳ ಸಂಖ್ಯೆ ಬೆಳೆದಂತೆ ಕಲಾಶಾಲೆಗೆ ಪ್ರತ್ಯೇಕವಾದ ಕಟ್ಟಡದ ಅವಶ್ಯಕತೆಯುಂಟಾಯಿತು. ಹಿಂದೆ ವ್ಯಾಯಾಮ ಶಾಲೆಯಾಗಿದ್ದು ಯಾರೂ ವಾಸಮಾಡದೇ, ಯಾವ ವ್ಯಾಯಾಮ ತರಗತಿಗಳೂ ನಡೆಯದೇ ಹಾಳು ಬೀಳುವ ಸ್ಥಿತಿಯಲ್ಲಿ ಚಿಕ್ಕ ಕಟ್ಟಡವೊಂದರ ಅಸ್ತಿತ್ವ ಅಕ್ಕಿ ಅವರ ಕಣ್ಣಿಗೆ ಬಿತ್ತು. ಆ ಕಟ್ಟಡದ ಉಸ್ತುವಾರಿಯನ್ನು ಅಕ್ಕಿ ಅವರ ಸಹೋದ್ಯೋಗಿ ವ್ಯಾಯಾಮ ಶಿಕ್ಷಕ ವೈ. ಎಫ್. ಬಂಗ್ಲೇದ ಅವರು ನೋಡಿಕೊಳ್ಳುತ್ತಿದ್ದರು. ಆ ಕಟ್ಟಡವನ್ನು ಕಲಾಶಾಲೆಯನ್ನು ನಡೆಸುವದಕ್ಕಾಗಿ ಬಂಗ್ಲೇದ ಅವರನ್ನು ಕೇಳಿದಾಗ- ''ಅವಶ್ಯವಾಗಿ ನಿಮ್ಮ ಕಲಾಶಾಲೆಯನ್ನು ನೀವು ಅಲ್ಲಿ ನಡೆಸಬಹುದು. ಯಾವುದಕ್ಕೂ ಒಂದು ಮಾತು ಬುಳ್ಳಾ ಸಿದ್ಧಣ್ಣನವರನ್ನು ಕೇಳುವದೊಳಿತು.''- ಎಂದರು.

ಬುಳ್ಳಾ ಸಿದ್ಧಣ್ಣನವರು ಅಕ್ಕಿಯವರಿಗೆ ಹೊಸಬರೇನಾಗಿರಲಿಲ್ಲ. ಗದುಗಿನ ಶ್ರೀಮಂತರಲ್ಲೊಬ್ಬರಾದ ಸಿದ್ಧಣ್ಣನವರು ಅಕ್ಕಿ ಅವರ ಶಿಷ್ಯರೇ ಆಗಿದ್ದು ಕಲಾಪ್ರೇಮಿಗಳಾಗಿದ್ದರು. ಬುಳ್ಳಾ ಸಿದ್ಧಣ್ಣನವರ ಹೃದಯ ವೈಶಾಲ್ಯತೆಯನ್ನು ಕುರಿತು ಹೇಳುವದಾದರೆ-ಹಿಂದೊಮ್ಮೆ ಅಕ್ಕಿಯವರಿಗೆ ಆರ್ಥಿಕ ತೊಂದರೆ ಯಾದಾಗ ಅಣ್ಣ ಶಿವಾನಂದರ ಹತ್ತು ಹನ್ನೆರಡು ಭೂದೃಶ್ಯ, ಸಾಗರದೃಶ್ಯ (Land-scapes and Sea-scapes) ಚಿತ್ರಗಳನ್ನು ತೆಗೆದುಕೊಂಡು ಹೋಗಿ "ಇವುಗಳಲ್ಲಿ ಒಂದೆರಡನ್ನಾದರೂ ಖರೀದಿಸಿ ನಮ್ಮ ಆರ್ಥಿಕ ಅಡಚಣೆಯನ್ನು ದೂರಮಾಡಿ" ಎಂದು ಟಿ.ಪಿ. ಅಕ್ಕಿ ಅವರು ಕೇಳಿದಾದ ಸಿದ್ಧಣ್ಣನವರು ಎಲ್ಲ ಚಿತ್ರಗಳನ್ನೂ ಒಂದಾವರ್ತಿ ವೀಕ್ಷಿಸಿ ಎಲ್ಲ ಚಿತ್ರಗಳನ್ನೂ ತಮ್ಮ ಗುಮಾಸ್ತನ ಕೈಗೆ ಕೊಟ್ಟು-"ಈ ಎಲ್ಲ ಚಿತ್ರಗಳಿಗೂ ಕಟ್ಟು ಹಾಕಿಸಿಕೊಂಡು ಬಾ"-ಎಂದು ಹೇಳಿ ಅಕ್ಕಿಯವರ ಕಡೆಗೆ ತಿರುಗಿ-

"ಗುರುಗಳೇ, ಹೇಳಿ, ನಿಮಗೆಷ್ಟು ಹಣಬೇಕು?"

ಟಿ.ಪಿ. ಅಕ್ಕಿ ತಮಗೆ ಅಗತ್ಯವಾದಷ್ಟು ಹಣವನ್ನು ಕೇಳಿದರು. ಸಿದ್ಧಣ್ಣನವರು ಮರು ಮಾತಾಡದೇ ಅಷ್ಟೂ ಹಣವನ್ನು ಕೊಟ್ಟುಕಳಿಸಿದರು.

ಅಂಥ ಕೊಡುಗೈದೊರೆ, ಬುಳ್ಳಾ ಸಿದ್ಧಣ್ಣನವರೇ ವೀರಶೈವ ಯುವಕ ಸಂಘದ ಮುಂದಾಳುವಾಗಿದ್ದು ಕರ್ನಾಟಕ ವ್ಯಾಯಾಮ ಶಾಲೆಯ ಅಧಿಕಾರಿಗಳಾದುದರಿಂದ ಆ ಕಟ್ಟಡದಲ್ಲಿ ಕಲಾಶಾಲೆಯನ್ನು ನಡೆಸಲು ಅನುಮತಿ ಪಡೆಯುವದು ಟಿ.ಪಿ. ಅವರಿಗೇನೂ ಕಷ್ಟವಾಗಲಿಲ್ಲ. ಮುನಸಿಪಲ್ ಹೈಸ್ಕೂಲಿನ ಚಿತ್ರಕಲಾ ತರಗತಿಯಲ್ಲಿ ನಡೆಸಿಕೊಂಡು ಬಂದ ವಿಜಯ ಕಲಾಮಂದಿರ ಸಾವಿರದ ಒಂಭೈನೂರ ಐವತ್ತರಲ್ಲಿ ಕರ್ನಾಟಕ ವ್ಯಾಯಾಮ ಶಾಲಾಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಇದೇ ವರುಷ ಮುಂಬಯಿ ಸರಕಾರವು ಟಿ.ಪಿ. ಅಕ್ಕಿ ಅವರನ್ನು ಸರಕಾರದ ಚಿತ್ರಕಲಾ ಶಿಕ್ಷಣದ ಸಲಹಾ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಿತು. ಸಲಹಾ ಸಮಿತಿಯ ಸದಸ್ಯರಾಗಿ ನಾಲ್ಕು ವರುಷಗಳ ಕಾಲ ಅಕ್ಕಿ ಅವರು ಆಗಿನ ಮುಂಬಯಿ ಪ್ರಾಂತದ ಚಿತ್ರಕಲಾ ಶಿಕ್ಷಣದ ಏಳಿಗೆಗಾಗಿ ಅವಿರತವಾಗಿ ತಮ್ಮ ಸೇವೆಯನ್ನು ಸಲ್ಲಿಸಿದರು. ಅದು ಶ್ಲಾಘನೀಯ ಸೇವೆಯಾಗಿತ್ತಲ್ಲದೇ ಅಕ್ಕಿಯವರ ಮಹತ್ವಾಕಾಂಕ್ಷೆಯ ವ್ಯಕ್ತಿತ್ವವನ್ನು ಶಿಖರಕ್ಕೇರಿಸಿತೆಂದೇ ಹೇಳಬೇಕು. ಹೀಗೆ ಪ್ರಾರಂಭವಾದ ವಿಜಯ

ಕಲಾಮಂದಿರ ಬೃಹದಾಕಾರ ತಾಳಿ, ತನ್ನದೇ ಆದ ಕಟ್ಟಡ, ಪ್ರಭಾವೀ ಶಿಕ್ಷಕರುಗಳನ್ನು ವೈಗೂಡಿಸಿಕೊಂಡು ವಾಮನಾವತಾರದಿಂದ ತ್ರಿವಿಕ್ರಮಾವತಾರವನ್ನು ಪಡೆಯಿತು. ಇಂದು ಈ ಕಲಾಶಾಲೆಯನ್ನು ಸಂದರ್ಶಿಸುವ ಪ್ರತಿಯೊಬ್ಬ ಕಲಾಪ್ರೇಮಿಯೂ ಅಕ್ಕಿಯವರು ಇಂಥ ಒಂದು ಸಂಸ್ಥೆಯನ್ನು ಕಟ್ಟುವಲ್ಲಿ ತೋರಿದ ಸಾಹಸ, ಪಟ್ಟಶ್ರಮಗಳನ್ನು ಕಂಡು ಬೆರಳು ಕಚ್ಚುತ್ತಾನೆ. ಅಕ್ಕಿಯವರ ರಚನಾತ್ಮಕ ಕ್ರಿಯಾಶಕ್ತಿಯ ಹಿರಿಮೆಯನ್ನು ಕಂಡು ತಬ್ಬಿಬ್ಬಾಗುತ್ತಾನೆ. ಮನೆತನದಿಂದ ಶ್ರೀಮಂತರೇನೂ ಅಲ್ಲವಾದ ಅಕ್ಕಿಯವರು ಸ್ವತಃ ಸಾಂಸಾರಿಕ ತಾಪತ್ರಯಗಳಲ್ಲಿ ತೊಳಲಾಡುತ್ತ ಕಲಾ ವಿದ್ಯಾರ್ಥಿಗಳ ಸುಪ್ತ ಚೈತನ್ಯವನ್ನು ಜಾಗೃತಗೊಳಿಸುವಲ್ಲಿ ಗಂಧವಾಗಿ ತಮ್ಮ ಜೀವನವನ್ನು ತೇಯ್ದಿದ್ದಾರೆಂದು ಇಂದಿನ ವಿಜಯ ಕಲಾಮಂದಿರ ಹಾಗೂ ಕಲಾಸಂಕೀರ್ಣಗಳನ್ನು ಕಂಡವರು ಯಾರಾದರೂ ನಿರ್ದುಷ್ಟವಾದ ಅಭಿಪ್ರಾಯಕ್ಕೆ ಬರುತ್ತಾರೆ.

ಕಲಾಶಾಲೆ ಪ್ರಾರಂಭವಾದ ಹೊಸತರಲ್ಲಿ ಅಕ್ಕಿಯವರ ಈ ಸಾಹಸವನ್ನು 'ಹುಚ್ಚು ಸಾಹಸ'ವೆಂದು ಮೂದಲಿಸಿದವರಿದ್ದಾರೆ; ಅವಹೇಳನ ಮಾಡಿದವರಿದ್ದಾರೆ. ಕಲಾವಿದ್ಯಾರ್ಥಿಗಳು ಲೈಫ್ ಸ್ಟಡಿ (ಭಾವಚಿತ್ರ) ಮಾಡುವಾಗ ಮಾಡೆಲ್‌ಗಳನ್ನು (ಸ್ತ್ರೀ ಮತ್ತು ಪುರುಷರನ್ನು) ಎದುರಿಗೆ ಕುಳ್ಳರಿಸಿಕೊಂಡು ಚಿತ್ರಿಸುವದನ್ನು ಕಂಡ ಸಾಂಪ್ರದಾಯವಾದಿಗಳು "ಅಕ್ಕಿಯವರು ಕಲಾಮಂದಿರದಲ್ಲಿ ಊರಿನ ಹೆಣ್ಣುಮಕ್ಕಳನ್ನು ಎದುರಿಗೆ ಕುಳ್ಳಿರಿಸಿ ವಿದ್ಯಾರ್ಥಿಗಳಿಂದ ಚಿತ್ರ ತೆಗೆಸುತ್ತಾರೆ; ಎಂಥ ಅಸಹ್ಯಕರವಾದ ಸಂಸ್ಕೃತಿಗೆ ದಾರಿ ಮಾಡಿಕೊಡುತ್ತಿದ್ದಾರೆ"-ಎಂದು ಮುಂತಾಗಿ ಅವಹೇಳನಕರವಾದ ಮಾತುಗಳಿಂದ ಅಪಪ್ರಚಾರ ಮಾಡುತ್ತಿದ್ದ ವ್ಯಕ್ತಿಗಳಿಂದ ಹಿಮಗಿರಿಯ ಉತ್ತುಂಗ ಶೃಂಗದಂತಿದ್ದ ಅಕ್ಕಿಯವರ ಮೇರು ವ್ಯಕ್ತಿತ್ವ ಸ್ವಲ್ಪವೂ ವಿಚಲಿತವಾಗಲಿಲ್ಲ. ಇಂಥ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸುತ್ತಲೇ ಅಕ್ಕಿಯವರು ಕಲಾಮಂದಿರದಲ್ಲಿ ಸಂಗೀತ, ನೃತ್ಯ, ನಾಟಕಾದಿಗಳ ಅಭ್ಯಾಸಕ್ಕೂ ಅವಕಾಶವನ್ನು ಕಲ್ಪಿಸುವದಕ್ಕಾಗಿ "ವಿಜಯ ನಾಟ್ಯ ಸಂಘ" ವೆಂಬ ಸೋದರ ಸಂಸ್ಥೆಗೂ ಹುಟ್ಟುಹಾಕಿದರು. ಗದುಗಿನಲ್ಲಿ ಬೆಳೆಯುತ್ತಿರುವ ವಿಜಯ ಕಲಾಮಂದಿರವು ದಕ್ಷಿಣ ಭಾರತದ ಶಾಂತಿನಿಕೇತನವಾಗಬೇಕೆಂದು ಆಶಿಸಿದರು. ಅಕ್ಕಿಯವರ ಈ ಸಾಹಸ ಪ್ರವೃತ್ತಿಯನ್ನೂ ಬಾರಿ ಬಾರಿಗೆ ಅಡ್ಡಿಯಾಗುತ್ತಿರುವ

ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಲು ಅಕ್ಕಿಯವರು ಪಡುವ ಯಾತನೆಗಳನ್ನೂ ಗಮನಿಸಿದ ಅವರ ಹಿತೈಷಿಯೊಬ್ಬರು ಅಕ್ಕಿಯವರನ್ನು ಹೆದರಿಸುವ ರೀತಿಯಲ್ಲಿ-

"ಅಕ್ಕಿಯವರೇ, ಈ ಹುಚ್ಚು ಸಾಹಸವನ್ನು ಕೈಬಿಟ್ಟು ನಿಮ್ಮಷ್ಟಕ್ಕೆ ನೀವು ಚಿತ್ರಕಲಾ ಶಿಕ್ಷಕರಾಗಿ ಮನೆಯಲ್ಲಿ ಕುಳಿತು ಕಲಾಕೃತಿಗಳನ್ನು ರಚಿಸುತ್ತಿದ್ದರೆ ನಿಮಗೆ ಒಳ್ಳೆಯ ಹೆಸರೂ ಬರುತ್ತದೆ; ಹಣವೂ ಸಂಪಾದನೆಯಾಗುತ್ತದೆ ಹಾಯಾಗಿ ಜೀವಿಸಿಕೊಂಡಿರಬಹುದು"-ಎಂದು ಬುದ್ಧಿವಾದವನ್ನು ಹೇಳಿದರು.

ಅಕ್ಕಿಯವರು ಸ್ನೇಹಿತರ ಅಕಾಲಿಕ, ಅಸಮರ್ಪಕ ಬುದ್ಧಿವಾದದಿಂದ ಕೋಪಿಸಿಕೊಳ್ಳಲಿಲ್ಲ; ಅವರು ಎಂದಿನ ಶಾಂತಸ್ವರದಲ್ಲಿಯೇ ನಗುನಗುತ್ತಲೇ ಹೇಳಿದರು-

"ಸ್ನೇಹಿತರೇ, ಹಿಂದೆ ತುಂಗಭದ್ರಾ ಅಣೆಕಟ್ಟನ್ನು ಕಟ್ಟುವಾಗ ಇಂಜನಿಯರರೊಬ್ಬರ ಮೇಲೆ ದೊಡ್ಡ ಕಬ್ಬಿಣದ ತೊಲೆಯೊಂದು ಬಿದ್ದು ಸ್ಥಳದಲ್ಲಿಯೇ ಪ್ರಾಣ ನೀಗಿದರು; ಅಣೆಕಟ್ಟು ಕಟ್ಟುವದನ್ನು ನಿಲ್ಲಿಸಿದರೇ? ಇಲ್ಲ, ಹಿಂದೆ ಅದ್ಭುತವಾದ ದೇವಮಂದಿರಗಳನ್ನು, ಮಸೀದಿ, ಗುಂಬಜ್‌ಗಳನ್ನು ಕಟ್ಟುವಾಗ ಅದೆಷ್ಟು ಘನವಂತರಾದ ವಾಸ್ತುಶಿಲ್ಪಿಗಳು ಸತ್ತರೋ! ಅದೆಷ್ಟು ಕುಶಲ ಕರ್ಮಿಗಳು ಜೀವತೆತ್ತರೋ ನಮಗೆ ತಿಳಿದಿಲ್ಲ"; ಅದೆಲ್ಲ ಇತಿಹಾಸ . ಆದರೂ ನಾವಿಂದು ಆ ಘನತೆವೆತ್ತ ಸ್ಮಾರಕಗಳನ್ನು ಇಂದಿಗೂ ನೋಡುತ್ತಿದ್ದೇವೆ. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲು ಅದೆಷ್ಟು ಸ್ವಾತಂತ್ರ್ಯ ಹೋರಾಟಗಾರರು ಪರಕೀಯರ ಗುಂಡಿಗೆ, ನೇಣಿಗೆ ಆಹುತಿಯಾದರೆಂದು ನಾವೆಲ್ಲ ಕಣ್ಣಾರೆ ಕಂಡ ನಗ್ನ ಸತ್ಯ. ಆ ಮಹಾ ಚೈತನ್ಯಗಳ ಸಾಹಸವನ್ನು ಹುಚ್ಚು ಸಾಹಸವೆಂದು ಕರೆಯಲಾದೀತೆ? ನಾನು ಚಿಂತಿಸದೇ ಇರುವುದನ್ನು ನೀವೇಕೆ ಚಿಂತಿಸಬೇಕು? ನಿಮ್ಮ ಮಾತೂ ನಿಜ. ನಾನು ಕಲಾಕೃತಿಗಳನ್ನು ಸೃಷ್ಟಿಸುತ್ತ ಹಣವನ್ನೂ ಸಂಪಾದಿಸಬಹುದು; ಕೀರ್ತಿಯನ್ನೂ ಸಂಪಾದಿಸಬಹುದು. ಅದೆಲ್ಲ ಸ್ವಾರ್ಥ. ನನ್ನ ಮಟ್ಟಿಗೆ ಕಲಾರಂಗದಲ್ಲಿ ವೈಯಕ್ತಿಕ ಸಾಧನೆಗಿಂತ ಸಾಮೂಹಿಕ ಸಾಧನೆ ಮುಖ್ಯವಾದುದು. ಅಲ್ಲದೇ ನನ್ನನ್ನೇ ನಂಬಿ, ನೆಚ್ಚಿ ನನ್ನ ಬೆನ್ನು ಹತ್ತಿದ ನೂರಾರು ಕಲಾವಿದ್ಯಾರ್ಥಿಗಳ ಭವಿಷ್ಯವನ್ನು ನಾನೇ ಹಾಳುಮಾಡಲು ನನ್ನಿಂದ ಸಾಧ್ಯವಿಲ್ಲ. ಲೋಕದೊಳಗೆ ಹುಟ್ಟಿದ

ಬಳಿಕ ಸ್ತುತಿ ನಿಂದೆಗಳು ಬಂದರೆ ಸಮಾಧಾನಿಯಾಗಿರಬೇಕು ಎಂದು ಹೇಳಿದ ಅಕ್ಕನವರ ಮಾತು ನಿಮಗೂ ತಿಳಿದಿರಲು ಸಾಕು. ಕರ್ತವ್ಯ ನಿಷ್ಠೆ, ಸರಳ ಸೌಜನ್ಯತೆ, ವಿಶ್ವಾಸಾರ್ಹವಾದ ಹೊಂದಾಣಿಕೆಗಳಿಂದ ಏನೆಲ್ಲವನ್ನೂ ಸಾಧಿಸಬಹುದೆಂದು ನಂಬಿದವನು ನಾನು. ನೀವು ನನಗೆ ಒಳ್ಳೆಯದಾಗಲಿ ಎಂದು ಬಯಸುವಿರಾದರೆ ಅಕ್ಕಿಯವರೇ ನಿಮ್ಮ ಸಾಹಸ, ಪ್ರಯತ್ನಗಳನ್ನು ಖಂಡಿತ ಅರ್ಧಕ್ಕೆ ನಿಲ್ಲಿಸಬೇಡಿರಿ "ಎಂದು ಹೇಳಿರಿ ನನ್ನನ್ನು ಹರಸಿರಿ" ಎಂದು ಕಡ್ಡೀ ಮುರಿದಂತೆ – ನುಡಿದುದನ್ನು ಕೇಳಿದ ಆ ಹಿತೈಷಿಯ ಗತಿ ಏನಾಗಿರಬೇಡ.

ಹೌದು; ಅಕ್ಕಿಯವರ ಶಿಷ್ಯವತ್ಸಲತೆಯೇ ಅಂಥದು. ತಮ್ಮ ಶಿಷ್ಯರು ವಿಶ್ವ ವಿಖ್ಯಾತರಾಗಲೆಂದೇ ತಮ್ಮ ಜೀವನ ಪರ್ಯಂತವೂ ಆಶೆಪಟ್ಟ ಮಹಾಚೇತನ ಶ್ರೀ ಟಿ.ಪಿ. ಅಕ್ಕಿ. ಸರಕಾರದಿಂದ ಸಾಕಷ್ಟು ಸಹಾಯಧನ ದೊರೆಯದಿದ್ದಾಗ ಹೈಸ್ಕೂಲು ಚಿತ್ರಕಲಾ ಶಿಕ್ಷಕ ಸೇವೆಯನ್ನು ಮೊಟಕುಗೊಳಿಸಿ, ಸೇವೆಗೆ ರಾಜೀನಾಮೆಯಿತ್ತು ತಮ್ಮ ಭವಿಷ್ಯನಿಧಿ (Provident fund) ಯನ್ನು ತಕ್ಷಣವೇ ತರಿಸಿಕೊಂಡು ಶಿಷ್ಯರ, ಸಂಸ್ಥೆಯ ಏಳಿಗೆಗಾಗಿ ಬಳಸಿದ ಹೃದಯವಂತ ಟಿ.ಪಿ. ಅಕ್ಕಿ. ಮುಂಬಯಿಗೆ ಪರೀಕ್ಷೆಗೆಂದು ಹೋದ ಶಿಷ್ಯ ಹಣಕ್ಕಾಗಿ ಪತ್ರಬರೆದಾಗ ಧರ್ಮಪತ್ನಿಯ ಕಂಠಹಾರವನ್ನು ಒತ್ತೆಯಿಟ್ಟು ಶಿಷ್ಯನಿಗೆ ಹಣಕಳಿಸಿದ ಅನೇಕ ಪ್ರಸಂಗಗಳೂ ಇಲ್ಲದಿಲ್ಲ. ಅವರ ಮಾತಿನಲ್ಲಿದ್ದ ಮಾಧುರ್ಯ, ಹೃದಯದಲ್ಲಿದ್ದ ದಯೆ, ದೃಷ್ಟಿಯಲ್ಲಿದ್ದ ಸೌಜನ್ಯಗಳು, ಗುರು–ಶಿಷ್ಯರಲ್ಲಿಯ ಮೈತ್ರಿ, ಗುಡ್ಡದಷ್ಟು ದೊಡ್ಡವಾಗಿ ಬೆಳೆದ ಸದಭಿಮಾನತೆಗಳಿಂದಾಗಿಯೇ ಗದುಗಿನ ವಿಜಯ ಕಲಾಮಂದಿರ ಇಂದು ಬೃಹತ್ ಸಂಸ್ಥೆಯಾಗಿ ಬೆಳೆದು ನಿಂತಿದೆ. "ಟಿ.ಪಿ. ಅಕ್ಕಿ ಅವರು ಗದುಗಿನಲ್ಲಿ ಅಂದು ಈ ಕಲಾಮಂದಿರವನ್ನು ಕಟ್ಟಿ, ಯುವ ಕಲಾವಿದರನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಿರತರಾಗಿರದಿದ್ದರೆ, ನವ ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಕರ ಹಾಗೂ ನವ ಕಲಾವಿದರ ಪೀಳಿಗೆಯ ಅರಬನ್ನು ಈ ರಾಜ್ಯ ಅನುಭವಿಸಬೇಕಾಗುತ್ತಿತ್ತು" – ಎಂದು ಈ ಕಲಾಶಾಲೆಯನ್ನು ಸಂದರ್ಶಿಸಿದ ಶಿಕ್ಷಣ ತಜ್ಞರೊಬ್ಬರು ಅಭಿಪ್ರಾಯಪಟ್ಟಿದು ಎಷ್ಟೊಂದು ಸತ್ಯವಾಗಿದೆ. ಟಿ.ಪಿ. ಅಕ್ಕಿಯವರ ಪ್ರಥಮ ಪರಿಶ್ರಮದಿಂದಾಗಿಯೇ ಇಂದು ಅಖಂಡ ಕರ್ನಾಟಕದಲ್ಲಿ ಬಹು ಸಂಖ್ಯೆಯ ಕಲಾಶಾಲೆಗಳು ಬೆಳೆಯಲು ಅವಕಾಶವಾಯಿತೆಂದು ನಿಸ್ಸಂಕೋಚವಾಗಿ ಹೇಳಬಹುದಾಗಿದೆ; ಮಸುಕಾಗಿ ಮಾಸಿದ್ದ ಕಲಾಪ್ರಜ್ಞೆ

ಉಜ್ವಲವಾಗಿ "ಅನ್ಯರಿಗೆ ನಾವೇನೂ ಕಮ್ಮಿಯಲ್ಲ" ಎಂದು ಎದೆತಟ್ಟಿ ಹೇಳಿಕೊಳ್ಳುವ ಹಮ್ಮು ಬಿಮ್ಮುಗಳು ಕನ್ನಡ ಕಲಾವಿದರಲ್ಲಿ ಬೆಳೆದಿವೆ ಎಂದರೆ ಅತಿಶಯೋಕ್ತಿಯೇನಲ್ಲ. ಕನ್ನಡ ನಾಡಿನ ಚಿತ್ರಕಲಾ ಶಿಕ್ಷಕರಲ್ಲಿ ಶೇಕಡಾ ಅರವತ್ತರಷ್ಟು ಕಲಾಶಿಕ್ಷಕರು ಟಿ.ಪಿ. ಅಕ್ಕಿ ಅವರ ಕಲಾಶಾಲೆಯಲ್ಲಿಯೇ ಕಲಿತವರು. ರಾಜ್ಯಮಟ್ಟದ, ರಾಷ್ಟ್ರಮಟ್ಟದ ಅನೇಕ ಖ್ಯಾತ ಕಲಾವಿದರು ಟಿ.ಪಿ. ಅಕ್ಕಿ ಅವರ ಕಲಾಶಾಲೆಯಿಂದಲೇ ಬಂದವರು.

ಸಾವಿರದ ಒಂಭೈನೂರ ಅರವತ್ತರಲ್ಲಿ ಡ್ರಾಯಿಂಗ್ ಶಿಕ್ಷಕರ ತರಬೇತಿ ವರ್ಗಗಳನ್ನೂ ಮಣ್ಣಿನ ಪ್ರತಿಮಾ ನಿರ್ಮಾಣ ವರ್ಗಗಳನ್ನೂ ಜೊತೆಗೆ ಅಖಿಲ ಭಾರತ ಗಾಂಧರ್ವ ಮಹಾವಿದ್ಯಾಲಯದ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗಳ ಪರೀಕ್ಷಾ ಕೇಂದ್ರವನ್ನೂ ವಿಜಯ ಕಲಾಮಂದಿರಕ್ಕೆ ಪಡೆದುಕೊಂಡಾಗ ಹಿಂದೆ ತರಗತಿಗಳನ್ನು ನಡೆಸುತ್ತಿದ್ದ ಕರ್ನಾಟಕ ವ್ಯಾಯಾಮ ಶಾಲೆಯ ಚಿಕ್ಕ ಕಟ್ಟಡದಲ್ಲಿ ಸ್ಥಳದ ಅಭಾವ ತಲೆದೋರಿತು. ಈ ಕಟ್ಟಡದ ಪಕ್ಕದಲ್ಲಿದ್ದ ಖಾಲೀ ನಿವೇಶನವನ್ನು ಟಿ.ಪಿ. ಅಕ್ಕಿಯವರು ಸ್ವಂತ ಖರ್ಚಿನಿಂದ ಪಡೆದುಕೊಂಡರು. ಈ ಖಾಲೀ ನಿವೇಶನದಲ್ಲಿ ಕಲಾಮಂದಿರದ ಹೊಸ ಕಟ್ಟಡವನ್ನು ಕಟ್ಟಬೇಕು; ಎಲ್ಲಿದೆ ಹಣ? ಅಕ್ಕಿಯವರ ನಿಸ್ವಾರ್ಥ ಸೇವೆಯನ್ನು ಮನಗಂಡ ಗದುಗಿನ ಮಹಾಜನತೆ, ಗದುಗಿನ ನಗರ ಸಭೆಯವರು ಸಹಾಯ ನೀಡಲು ಮುಂದೆ ಬಂದರು. ಅಲ್ಲದೇ ಕೇಂದ್ರ ಸರಕಾರವೂ ಧನಸಹಾಯ ನೀಡಲು ಒಪ್ಪಿಕೊಂಡಿತು. ಗದುಗಿನ ಖ್ಯಾತ ವಾಸ್ತುಶಿಲ್ಪಿ ವಾಟವೆ ಅವರು ಯೋಜಿತ ಕಲಾಶಾಲೆಯ ಕಟ್ಟಡದ ನಕ್ಷೆಯನ್ನು ಸಿದ್ಧಗೊಳಿಸಿಕೊಟ್ಟರು. ಇನ್ನೇನು ಬುನಾದಿಗಾಗಿ ಗುದ್ದಲಿ ಪೂಜೆ ನಡೆಯಬೇಕು, ವಿಷಯ ತಿಳಿದು ಅಕ್ಕಿ ಅವರ ಮಿತ್ರ ವೈ. ಎಫ್. ಬಂಗ್ಲೇದ ಅವರು ಬಂದು ನೂತನ ಕಟ್ಟಡದ ನಕ್ಷೆಯನ್ನು ನೋಡಿದರು. ಕಟ್ಟಡದ ಮೇಲೇರುವ ಪಾವಟಿಗೆಗಳು ವ್ಯಾಯಾಮಶಾಲೆಯ ಅಂಗಳದಲ್ಲಿಯೇ ಸ್ಥಾಪಿತವಾಗಲಿರುವದನ್ನು ಗಮನಿಸಿದ ಬಂಗ್ಲೇದ ಅವರು ಕಟ್ಟಡವನ್ನು ಕಟ್ಟದಿರುವಂತೆ ತಡೆಯೊಡ್ಡಿದರು. ಬಂಗ್ಲೇದ ಅವರು ಅಕ್ಕಿಯವರ ವಿರೋಧಿಗಳೇನೂ ಅಲ್ಲ; ಅವರ ಅಭಿಮಾನಿಗಳು ಹಿತೈಷಿಗಳು. ವ್ಯಾಯಾಮ ಶಾಲಾ ಕಟ್ಟಡ ಹಾಗೂ ನಿವೇಶನಗಳನ್ನು ಕಾಯ್ದುಕೊಳ್ಳುವ ಬಂಗ್ಲೇದ ಅವರ ಕರ್ತವ್ಯ ದಕ್ಷತೆ - ಅಕ್ಕಿ ಅವರು ತಮ್ಮ ಕಲಾಶಾಲೆಯ ಕಟ್ಟಡವನ್ನು ಕಟ್ಟದಿರುವಂತೆ ಮಾಡಿತ್ತು. ಬಂಗ್ಲೇದ ಅವರ

ದಕ್ಷತೆಯನ್ನು ಅಕ್ಕಿ ಅವರು ಮನದಲ್ಲಿಯೇ ಮೆಚ್ಚಿಕೊಂಡರು. ಬುಳ್ಳಾ ಸಿದ್ಧಣ್ಣನವರು ಸಂಪೂರ್ಣವಾಗಿ ಕಟ್ಟಡದ ಉಸ್ತುವಾರಿಯನ್ನು ಬಂಗ್ಲೇದ ಅವರಿಗೇ ವಹಿಸಿ ನಿಶ್ಚಿಂತರಾಗಿದ್ದರು. ಇದೇ ಕಟ್ಟಡದಲ್ಲಿ ಹತ್ತು ವರುಷಗಳಿಂದಲೂ ಕಲಾಶಾಲೆ ವೈಭವದಿಂದ ಬೆಳೆದು ಬರುತ್ತಿದೆ; ಅದಕ್ಕೆ ಹೊಂದಿಕೊಂಡ ಖಾಲಿ ನಿವೇಶನ ಈಗ ಕಲಾಮಂದಿರದ ಸೊತ್ತಾಗಿದೆ. ಕಟ್ಟಡವನ್ನಂತೂ ಕಟ್ಟಲೇಬೇಕು. ಪಾವಟಿಗೆಗಳನ್ನು ಬೇರೆಡೆ ಕಟ್ಟಲು ಸ್ಥಳವಿಲ್ಲ; ಬದಲಿಸಿದರೆ ಕಟ್ಟಡದ ಕಲಾತ್ಮಕತೆ ಕುಂದುತ್ತದೆ. ಈಗೇನು ಮಾಡುವದು? ಅಕ್ಕಿಯವರಿಗೊಂದು ಯೋಚನೆ ಹೊಳೆಯಿತು. ಬಂಗ್ಲೇದ ಅವರು ಸಂಗೀತಾಭಿಮಾನಿಗಳಾಗಿದ್ದರು; ಸಂಗೀತವನ್ನು ಅಭ್ಯಸಿಸುತ್ತಿದ್ದರು. ಭಾರತದ ಸುಪ್ರಸಿದ್ಧ ಸಂಗೀತ ಕಲಾವಿದರಾದ ದಿ. ಮಲ್ಲಿಕಾರ್ಜುನ ಮನ್ಸೂರ ಅವರಲ್ಲಿ ಗಂಡಾಮಹೋತ್ಸವವನ್ನಾಚರಿಸಿ ವಿಧಿವತ್ತಾಗಿ ಮನ್ಸೂರ ಅವರ ಶಿಷ್ಯತ್ವವನ್ನು ವಹಿಸಿಕೊಂಡಿದ್ದರು. ಬುನಾದಿಯ ಗುದ್ದಲೀ ಪೂಜೆಗೆ ಮನ್ಸೂರ ಅವರನ್ನೇ ಕರೆದರೆ ಹೇಗೆ? ಎಂದು ಅಕ್ಕಿ ಚಿಂತಿಸಿದರು. ಮಲ್ಲಿಕಾರ್ಜುನ ಮನ್ಸೂರ ಅವರನ್ನು ಕಂಡು ತಮ್ಮ ಇಂಗಿತವನ್ನು ಅವರೆದುರು ತೋಡಿಕೊಂಡರು. ಮಲ್ಲಿಕಾರ್ಜುನ ಮನ್ಸೂರ ಅವರು ನೇರವಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಧಾವಿಸಿದರು. ಬಂಗ್ಲೇದ ಅವರನ್ನೂ ಕರೆಸಿದರು. ಅವರೆದುರಿನಲ್ಲಿಯೇ ಗುದ್ದಲೀ ಪೂಜೆಯನ್ನು ನೆರವೇರಿಸಿ ನೂತನ ಕಟ್ಟಡದ ಕೋನಶಿಲೆಯನ್ನೂ ಪ್ರತಿಷ್ಠಾಪಿಸಿ ಬಂಗ್ಲೇದ ಅವರಿಗೆ ಹೇಳಿದರು –

"ಯಲ್ಲಪ್ಪ, (ಮನ್ಸೂರರು ಬಂಗ್ಲೇದ ಅವರನ್ನು ಪ್ರೀತಿಯಿಂದ ಅವರ ಹೆಸರಿನಿಂದಲೇ ಕರೆಯುತ್ತಿದ್ದರು) ಅಕ್ಕಿಯವರು ಕಟ್ಟುತ್ತಿರುವದು ತಮ್ಮ ಸ್ವಂತ ಮನೆಯನ್ನಲ್ಲ. ಸಾರ್ವಜನಿಕರಿಗಾಗಿ ಕಟ್ಟಿದ ಈ ವ್ಯಾಯಾಮಶಾಲೆಯ ನಿವೇಶನದ ಈ ಭಾಗದಲ್ಲಿ ಕಟ್ಟಲಿರುವ ಕಲಾಶಾಲೆಯ ಕಟ್ಟಡವೂ ಸಾರ್ವಜನಿಕರಿಗಾಗಿಯೇ ಇರುತ್ತದೆಯಲ್ಲದೇ ಅವರು ಕಟ್ಟುತ್ತಿರುವದು ಕಲಾದೇವತೆಯ ಮಂದಿರ. ನೀನೂ ಕಲಾವಿದ. ಕಲಾದೇವಿಗಾಗಿ ಕಟ್ಟುತ್ತಿರುವ ಈ ದೇವಮಂದಿರದ ಕಟ್ಟಡಕ್ಕೆ ಅಡ್ಡಿಯನ್ನು ಉಂಟುಮಾಡಿದರೆ ಮಹಾ ಪಾಪ ಬಂದೀತು. ವ್ಯಾಯಾಮ ತರಗತಿಗಳು ನಡೆಯದೇ ಕತ್ತೆ ಹಂದಿಗಳ ಗೂಡಾಗಿದ್ದ ಈ ಕಟ್ಟಡ ಇಂದು ಪವಿತ್ರ ಸ್ಥಾನವಾಗಿ ಪರಿವರ್ತನೆಗೊಂಡಿದೆ. ಬೆಳೆಯಲಿ; ಇದೇ ಸ್ಥಳದಲ್ಲಿಯೇ

ಕಲಾದೇವತೆಯ ಮಂದಿರ ಅಡೆ-ತಡೆಗಳಿಲ್ಲದೇ ಬೆಳೆಯಲಿ. ನಾಡಿನ ಕಣ್ಮಣಿಯಾಗಲಿ'' ಬಂಗ್ಲೀದ ಅವರು ಮರು ಮಾತನಾಡಲಿಲ್ಲ.

ಹೀಗೆ ಅಕ್ಕಿಯವರ ಕರ್ತೃತ್ವಶಕ್ತಿಯನ್ನು ಕಂಡವರು ಅಕ್ಕಿಯವರ ಮುನ್ನಡೆಯಲ್ಲಿ ಉಂಟಾಗಬಹುದಾದ ಅಡೆತಡೆಗಳನ್ನು ಕ್ಷಣಮಾತ್ರದಲ್ಲಿ ಅಡಗಿಸಿಬಿಡುತ್ತಿದ್ದರು. ನಾಡಿನ ಗಣ್ಯರು ಶಿಕ್ಷಣ ಇಲಾಖೆಯ ಅಧಿಕಾರೀ ವರ್ಗದವರೆಲ್ಲರ ಸಹಾಯ ಸಹಕಾರಗಳು ಅಕ್ಕಿಯವರ ಸಂಕಲ್ಪಸಾಧನೆಗಳಿಗೆ ಪೂರಕವಾಗಿದ್ದವು.

ಈವರೆಗೆ ಉತ್ತರ ಕರ್ನಾಟಕದಲ್ಲಿ ಕೇವಲ ನಾಮಮಾತ್ರಕ್ಕಿದ್ದ ಕರ್ನಾಟಕ ಆರ್ಟ್ ಸೊಸೈಟಿಯ ಕಾರ್ಯದರ್ಶಿಗಳಾಗಿ ಟಿ.ಪಿ. ಅಕ್ಕಿ ಅವರು ಸಲ್ಲಿಸಿದ ಸೇವೆ, ಅಪೂರ್ವ. ಸೊಸೈಟಿಗೆ ಹೊಸ ಚೈತನ್ಯವನ್ನು ನೀಡಿ ಸರಕಾರದಿಂದ ಮಾನ್ಯತೆಯನ್ನು ಗಳಿಸಿಕೊಟ್ಟ ಶ್ರೇಯಸ್ಸು ಅಕ್ಕಿಯವರದು. ಅವರ ಸಂಕಲ್ಪದಂತೆ ವಿಜಯ ಕಲಾಮಂದಿರ ಪ್ರಗತಿ ಪಥದಲ್ಲಿ ಮುನ್ನಡೆಯತೊಡಗಿ, ಅಕ್ಕಿಯವರು ಸಮಾಧಾನದ ಉಸಿರು ಬಿಡುವಂತಾಯಿತು. ಹಾಗೆಂದು ಅವರ ಸಾಹಸಮಯ ಪ್ರವೃತ್ತಿ ತಟಸ್ಥವಾಗಲಿಲ್ಲ. ಸಾವಿರದ ಒಂಭೈನೂರ ಐವತ್ತಾರರಲ್ಲಿ ರಾಜ್ಯಗಳ ಪುನರ್ಘಟನೆಯ ನಂತರ ಮೈಸೂರು ರಾಜ್ಯವೆಂದು ಕರೆಯಲ್ಪಡುತ್ತಿದ್ದ ನವ ಕರ್ನಾಟಕ ರಾಜ್ಯದ ಚಿತ್ರಕಲಾ ಶಿಕ್ಷಣದತ್ತ ಅಕ್ಕಿಯವರ ಮನಸ್ಸು ಹೊರಳಿತು. ಆಗ ರಾಜ್ಯದ ಚಿತ್ರಕಲಾ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಬದಲಾವಣೆಗಳಾಗಲೀ ಚಿತ್ರಕಲಾ ಶಿಕ್ಷಣದ ಏಳಿಗೆಯ ಯಾವುದೇ ಕುರುಹುಗಳಾಗಲೀ ಅಕ್ಕಿಯವರಿಗೆ ಕಂಡುಬರಲಿಲ್ಲ. ಮನದಲ್ಲಿಯೇ ಹಳಹಳಿಸಿದರು; ಪೇಚಾಡಿದರು. ಸರಕಾರ ಅಕ್ಕಿಯವರ ಮನದ ಅಳಲನ್ನು ತಿಳಿದುಕೊಂಡಿತೋ ಏನೋ ಎಂಬಂತೆ ಸಾವಿರದ ಒಂಭೈನೂರ ಅರವತ್ತೆರಡರಲ್ಲಿ ರಾಜ್ಯ ಕಲಾ ಶಿಕ್ಷಣ ಮಂಡಳಿಯನ್ನು ರಚಿಸಿತು. ಅಕ್ಕಿ ಕಲಾ ಶಿಕ್ಷಣ ಮಂಡಳಿಯ ಗೌರವ ಸದಸ್ಯರಾದರು. ಕಲಾಶಿಕ್ಷಣ ಸಲಹಾ ಮಂಡಳಿಯ ರಚನೆಗೆ ಅಕ್ಕಿಯವರೂ ಸಹ ಸ್ಫೂರ್ತಿ ನೀಡಿರಬೇಕು. ಈ ಸಲಹಾ ಸಮಿತಿಯ ಸದಸ್ಯರಾಗಿ ಅಕ್ಕಿಯವರು ಕಲಾಶಾಲೆಗಳಲ್ಲಿ ಅಭ್ಯಸಿಸುವ ಕಲಾ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕಲಾಶಿಕ್ಷಣ, ಕಲಾ ಪರೀಕ್ಷೆಗಳು, ಕಲಾಶಾಲೆಗಳ ಅಭ್ಯಾಸ ಪತ್ರಿಕೆಗಳ ಸುಧಾರಣೆಗಳಿಗೆ ಅವಿರತವಾಗಿ ಪರಿಶ್ರಮಿಸಿ ರಾಜ್ಯದ ಕಲಾ ಶಿಕ್ಷಣದ ಮಟ್ಟವನ್ನು ಎತ್ತರಕ್ಕೇರಿಸಿದ ಅನೇಕ ಹಿರಿಯ ಕಲಾವಿದರು, ಕಲಾ ಶಿಕ್ಷಣ ತಜ್ಞರುಗಳಲ್ಲಿ ಅಗ್ರಗಣ್ಯ

ರಾಗಿದ್ದರೆಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಟಿ.ಪಿ. ಅಕ್ಕಿಯವರ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿದ ರಾಜ್ಯ ಲಲಿತ ಕಲಾ ಅಕಾಡೆಮಿಯು ಇದೇ ವರ್ಷ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಲಾವಿದರ ಸಮ್ಮೇಳನಕ್ಕೆ ರಾಜ್ಯದ ಪ್ರತಿನಿಧಿಯಾಗಿ ಕಳಿಸಿಕೊಟ್ಟಿತ್ತು.

ಈ ವೇಳೆಗಾಗಲೇ ಕರ್ನಾಟಕದಲ್ಲಿ ಸಾಕಷ್ಟು ಕಲಾಶಾಲೆಗಳು ಹುಟ್ಟಿಕೊಂಡಿದ್ದವು. ಸಮರ್ಥ ಕಲಾವಿದರಿಂದ ಸ್ಥಾಪಿಸಲ್ಪಟ್ಟ ಕಲಾಶಾಲೆಗಳಿಂದ ಸಮರ್ಥ ಕಲಾವಿದರೇ ಹುಟ್ಟಿ ಬರಬೇಕು. ನಾಡಿನ ನಾಲ್ಕೂ ನಿಟ್ಟಿನಲ್ಲಿ ಕಲೆಯ ಪ್ರಗತಿಯಾಗಬೇಕು, ಎಂಬುದೇ ಟಿ.ಪಿ. ಅಕ್ಕಿಯವರ ಆಶಯವಾಗಿತ್ತು. ಹೊಸತಾಗಿ ಕಲಾಶಾಲೆಗಳನ್ನು ಪ್ರಾರಂಭಿಸಿದ ವ್ಯಕ್ತಿಗಳಿಗೆ ಅವರ ಕಲಾಶಾಲೆ ಪ್ರಗತಿ ಹೊಂದುವ, ಸುಲಲಿತವಾಗಿ ನಡೆಸಿಕೊಂಡು ಹೋಗುವ ಮಾರ್ಗವನ್ನು ಅಕ್ಕಿ ಮುಕ್ತ ಮನಸ್ಸಿನಿಂದ ತೋರಿಸಿಕೊಟ್ಟರು. ರಾಜ್ಯದ ಕಲಾಶಾಲೆಗಳಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದ ಕಲಾಶಿಕ್ಷಕರಿಗೆ ಸರಕಾರದಿಂದ ನೇರವಾಗಿ ಸಂಬಳ ಪಾವತಿಯಾಗುವದಕ್ಕಾಗಿ ಅಕ್ಕಿಯವರು ಪಟ್ಟ ಪರಿಶ್ರಮ ದುಸ್ಸಹವಾದದ್ದು. ಮೊನ್ನೆಮೊನ್ನಿನವರೆಗೂ ಕಲಾಶಾಲೆಗಳ ಸಂಸ್ಥಾಪಕರೇ ತಮ್ಮ ತಮ್ಮ ಕಲಾಶಿಕ್ಷಕರನ್ನು ಪೋಷಿಸಿಕೊಂಡು ಬಹುಕಷ್ಟಸಾಧ್ಯದಿಂದ ಕಲಾಶಾಲೆಗಳನ್ನು ಬೆಳೆಸಿಕೊಂಡು ಬರಬೇಕಾಯಿತು. ಕಲಾಶಾಲೆಗಳಲ್ಲಿ ಕೆಲಸಮಾಡುವ ಕಲಾಶಿಕ್ಷಕರ ದುಃಸ್ಥಿತಿ ಕೊನೆಗೊಮ್ಮೆ ನಿವಾರಣೆಯಾಯಿತು. ಟಿ.ಪಿ. ಅಕ್ಕಿ ಅವರ ಕೊನೆಗಾಲದಲ್ಲಿ ಮುಂಬಯಿ ಸರಕಾರದ ಉಚ್ಚ ಕಲಾ ಪರೀಕ್ಷೆಗಳ ಪರೀಕ್ಷಕರಾಗಿ, ನಿಯಂತ್ರಕರಾಗಿ ಸಲಹೆಗಾರರಾಗಿ ಎರಡು ದಶಕಗಳ ಕಾಲ ಸೇವೆ ಸಲ್ಲಿಸಿದ ಅಕ್ಕಿಯವರು ನವ ಕರ್ನಾಟಕದಲ್ಲೂ ಕಲಾಶಿಕ್ಷಣ, ಕಲಾ ಪರೀಕ್ಷೆಗಳ ಪರೀಕ್ಷಕರಾಗಿ, ಪರಿವೀಕ್ಷಕರಾಗಿ, ನಿಯಂತ್ರಕರಾಗಿ, ಸಲಹೆಗಾರರಾಗಿ ಮೂವತ್ತು ವರುಷಗಳಿಗೂ ಮಿಕ್ಕಿದ ಸೇವೆಯನ್ನು ಸಲ್ಲಿಸಿದುದನ್ನು ಯಾವ ಕಲಾ ಶಿಕ್ಷಣ ತಜ್ಞರೂ ಮರೆಯುವಂತಿಲ್ಲ. ತಮ್ಮ ಜೀವಿತ ಕಾಲಾವಧಿಯ ಬಹುಭಾಗವನ್ನು ಅಂದರೆ ಸುಮಾರು ಐವತ್ತು ವರುಷಗಳಿಗೂ ಮಿಕ್ಕಿ ಕಲಾಶಿಕ್ಷಣ, ಕಲಾಶಾಲೆಗಳು, ಕಲಾವಿದರುಗಳ ಏಳಿಗೆಗಾಗಿಯೇ ಪಣಕ್ಕೊಡ್ಡಿ, ಕಲಾಕೃತಿಗಳನ್ನು ರಚಿಸುವದನ್ನು ಬಿಟ್ಟು ಕಳೆದುದರ ಪರಿಣಾಮವಾಗಿ ಕೇವಲ ಬೆರಳೆಣಿಕೆಯಷ್ಟು ಕಲಾಕೃತಿಗಳನ್ನು ರಚಿಸಿದ ಅಕ್ಕಿ ಅವರೊಬ್ಬ ಕಲಾವಿದರೂ ಹೌದು ಎಂಬುದನ್ನು ಇಂದು

ಕಲಾವಿದರೆಂದು ಹೇಳಿಕೊಳ್ಳುವ ಬಹು ಜನರು ಒಪ್ಪಿಕೊಳ್ಳದಿರುವುದೊಂದು ವಿಪರ್ಯಾಸವೆಂದೇ ಹೇಳಬೇಕು. ಸಾವಿರದ ಒಂಭೈನೂರ ಅರವತ್ತಾರರಿಂದ ರಾಜ್ಯ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿ ಹತ್ತು ವರುಷಗಳ ಕಾಲ ಅಕ್ಕಿ ಸಲ್ಲಿಸಿದ ಸೇವೆ ಅಗಾಧವಾದದ್ದು. ಲಲಿತ ಕಲಾ ಅಕಾಡೆಮಿಯ ಸ್ಥಾಪನಾಚಾರ್ಯರಾದ ಕುಂಚಬ್ರಹ್ಮ ದಿ. ಎಮ್.ವಿ. ಮಿಣಜಗಿ, ದಿ. ವಿ. ಹಾಲಭಾವಿ, ಸಿ.ವಿ. ಕಾರಡಗಿ ಮುಂತಾದ ಅಧ್ವರ್ಯುಗಳಿಗೆ ಅಕಾಡೆಮಿಯ ಸ್ಥಾಪನೆಗೆ ಸ್ಫೂರ್ತಿಯನ್ನಿತ್ತವರೂ ಅಕ್ಕಿ ಎಂಬುದು ಸರ್ವವಿದಿತ.

ಕರ್ನಾಟಕ ರಾಜ್ಯದ ಚಿತ್ರಕಲಾ ಶಿಕ್ಷಕರ, ಚಿತ್ರಕಲಾ ಶಿಕ್ಷಣದ ಅಭಿವೃದ್ಧಿಗಾಗಿ ಅಕ್ಕಿಯವರು ತಮ್ಮ ಕೊನೆಯುಸಿರಿನವರೆಗೂ ಶ್ರಮಿಸಿದರು. ಸಾವಿರದ ಒಂಭೈನೂರ ಅರವತ್ತೆಂಟರಲ್ಲಿ ಗದಗಿನಲ್ಲಿಯೇ ಕರ್ನಾಟಕ ರಾಜ್ಯದ ಚಿತ್ರಕಲಾವಿದರ ಹಾಗೂ ಚಿತ್ರಕಲಾ ಶಿಕ್ಷಕರ ನಾಲ್ಕನೆಯ ಸಮ್ಮೇಳನವನ್ನು ಸಂಘಟಿಸಿ ಕಲಾ ಶಿಕ್ಷಣ ಕ್ಷೇತ್ರದ ಬೇಕು ಬೇಡಗಳನ್ನು ನಿರ್ಧರಿಸುವಂತೆ ಪ್ರಚೋದನೆಯನ್ನು ನೀಡಿದರಲ್ಲದೇ ಕಲಾವಿದರ, ಕಲಾ ಶಿಕ್ಷಕರ ಜೀವನ ನೌಕೆಯು ಸಂಪೂರ್ಣವಾಗಿ ಮುಳುಗಿ ನಿರಾಶೆಯಲ್ಲಿದ್ದ ಅವರ ಬಾಳಿಗೆ ಆಶಾದಾಯಕವಾದ ಬೆಳಕೊಂದನ್ನು ತೋರಿಸಿ, ಕಲಾ ಶಿಕ್ಷಕರ, ಕಲಾವಿದರ ನಿಜವಾದ ಹಿತಚಿಂತಕರೆಂದು ಪ್ರಶಂಸೆಗೆ ಪಾತ್ರರಾದರು. ಇದೇ ವರುಷವೇ ಕರ್ನಾಟಕ ಸರಕಾರವು ಟಿ.ಪಿ. ಅಕ್ಕಿ ಅವರನ್ನು ರಾಜ್ಯದ ಪ್ರತಿನಿಧಿಯಾಗಿ ಆಯ್ಕೆ ಮಾಡಿ ಹೊಸದಿಲ್ಲಿಯಲ್ಲಿ ಜರುಗಿದ ಅಂತರ್ರಾಷ್ಟ್ರೀಯ ಚಿಕ್ಕ ಮಕ್ಕಳ ಕಲಾಪ್ರದರ್ಶನಕ್ಕೆ ಕಳಿಸಿಕೊಟ್ಟಿತು. ಕನ್ನಡನಾಡಿನ ಕಲಾ ಶಿಕ್ಷಣ ಕ್ಷೇತ್ರಕ್ಕೆ ಟಿ.ಪಿ. ಅಕ್ಕಿ ಅವರಿಂದ ಒಬ್ಬ ವ್ಯಕ್ತಿಯಿಂದ ಸಲ್ಲಬೇಕಾದ ಸೇವೆಗಿಂತಲೂ ಹೆಚ್ಚಿನ ಸೇವೆ ಸಂದಿದೆ. ಅವರ ಸೇವಾ ಹಿರಿಮೆಯನ್ನು ಗೌರವಿಸಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಅವರಿಗೆ ಸಾವಿರದ ಒಂಭೈನೂರ ಅರವತ್ತೊಂಭತ್ತು ಮತ್ತು ಎಪ್ಪತ್ತನೇ ವರುಷದ ಪ್ರಶಸ್ತಿಯನ್ನು ನೀಡಿತು. ಸಾಲದೆಂಬಂತೆ ಸಾವಿರದ ಒಂಭೈನೂರ ಎಂಭತ್ತೊಂದರಿಂದ ಮೂರು ವರುಷಗಳ ಅವಧಿಗೆ ಅಕಾಡೆಮಿಯ ಅಧ್ಯಕ್ಷರಾಗಿರುವ ಅವಕಾಶವೂ ಅವರಿಗೆ ಬಂದಿತ್ತು. ಅಕಾಡೆಮಿಯ ಅಧ್ಯಕ್ಷರಾಗಿ ಅಕ್ಕಿಯವರು ಸಲ್ಲಿಸಿದ ಸೇವೆ ಅದ್ವಿತೀಯವಾಗಿತ್ತು. ಕನ್ನಡ ನಾಡಿನ ಸಮಕಾಲೀನ ಕಲೆಯ ಇಂದಿನ ವಿರಾಡ್ರೂಪ ದರ್ಶನದಲ್ಲಿ ಶ್ರೀಯುತರ ಶ್ರಮವೂ ಸೇರಿದೆ. ''ಸಾಮಾಜಿಕ, ಧಾರ್ಮಿಕ; ರಾಜಕೀಯ

ಬದಲಾವಣೆಗಳೊಂದಿಗೆ ಸಾಮರಸ್ಯವನ್ನು ಹೊಂದಲೇ ಬೇಕಾಗಿರುವ ಬದುಕಿನ ರೀತಿ ನೀತಿಗಳೊಂದಿಗೆ ಕಲಾ ಸಂಸ್ಕೃತಿಯ ಬದಲಾವಣೆಯೂ ಅಗತ್ಯವಾಗಿದೆ'' ಎಂದೇ ಹೇಳಿತ್ತಿದ್ದ ಅಕ್ಕಿಯವರ ಮನೋವೈಶಾಲ್ಯತೆ ಆಳವಾದುದಾಗಿತ್ತು.

ಸಾವಿರದ ಒಂಭೈನೂರ ಎಪ್ಪತ್ತರಲ್ಲಿ ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಅಭ್ಯಾಸ ಪತ್ರಿಕೆಗಳಿಗೆ ಸಲಹಾಗಾರರಾಗಿ, ಕರ್ನಾಟಕ ವಿಶ್ವ ವಿದ್ಯಾಲಯವು ಸಂಗ್ರಹಿಸಿದ ''ಚಿತ್ರಕಲಾ ಇತಿಹಾಸ'' ಗ್ರಂಥ ಸಂಪಾದಕರಾಗಿ, ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದ ಚೇರಮನ್ನರಾಗಿ, ರಾಜ್ಯದ ಕಲಾಶಾಲೆಗಳ ಫೆಡರೇಷನ್ನಿನ ಅಧ್ಯಕ್ಷರಾಗಿ ಎಂಟು ವರುಷ ಸೇವೆ ಸಲ್ಲಿಸಿದ ಟಿ.ಪಿ. ಅಕ್ಕಿ ಅವರು ಸಾವಿರದ ಒಂಭೈನೂರ ಎಪ್ಪತ್ತೆರಡರಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿ ಆಯ್ಕೆಗೊಂಡು ರಾಷ್ಟ್ರಮಟ್ಟದಲ್ಲಿ ತಮ್ಮ ಹಿರಿಮೆಯನ್ನು ಬೆಳೆಸಿಕೊಂಡವರಾಗಿದ್ದರು. ಅಲ್ಲದೇ ಮೈಸೂರು ಆರ್ಟ್ ಅಕಾಡೆಮಿ ಜನರಲ್ ಕೌನ್ಸಿಲ್‌ದ ಸದಸ್ಯರಾಗಿ, ಸಾವಿರದ ಎಂಭತ್ತೊಂರರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಸಾಂಸ್ಕೃತಿಕ ಕಮಿಟಿಯ ಹಾಗೂ ಕಲಾ ಮಹೋತ್ಸವ ಮೆರವಣಿಗೆಯ ಸದಸ್ಯರಾಗಿ ಶ್ರಮಿಸಿದ ಶ್ರೇಯಸ್ಸನ್ನು ಪಡೆದ ಅಕ್ಕಿಯವರು ಮಹೋನ್ನತ ವ್ಯಕ್ತಿಯಾಗಿದ್ದರು.

